# ತುಮಕೂರು ಜಿಲ್ಲೆ



ಶ್ರೀ ಶಿವಕುಮಾರ ಸ್ವಾಮಿ ಐ.ಎನ್ ಬಿನ್ ನಾರಾಯಣ
ಬಸವನಪುರ ಗ್ರಾಮ, ಹುತ್ರಿದುರ್ಗ ಹೋಬಳಿ
ಕುಣಿಗಲ್ ತಾಲ್ಲೂಕು,
ತುಮಕೂರು ಜಿಲ್ಲೆ
ದೂ:

ಶ್ರೀ ಶಿವಕುಮಾರ ಸ್ವಾಮಿ ರವರು ಮೂಲತಹ ಯೋಧರಾಗಿ ದೇಶದ ಗಡಿಯಲ್ಲಿ ಸೇವೆಯನ್ನು ಸಲ್ಲಿಸಿ, ನಿವೃತ್ತಿಯೊಂದಿ ಕೃಷಿಯ ಕಡೆ ಮುಖ ಮಾಡಿ ಇಂದು ಸಮಗ್ರ ಕೃಷಿ ಅಳವಡಿಸಿಕೊಂಡು ಸಂತೃಪ್ತ ಜೀವನ ನಡೆಸುತ್ತಿರುವ ಜಿಲ್ಲೆಯ ಹೆಮ್ಮೆಯ ಪ್ರಗತಿಪರ ರೈತರಾಗಿದ್ದಾರೆ. ಇವರು ತಮ್ಮ 5 ಎಕರೆಗಳಲ್ಲಿ ಕೃಷಿ ಬೆಳೆಗಳಾದ ನವಣೆ, ಸಜ್ಜೆ, ರಾಗಿ, ತೊಗರಿ ಹಾಗೂ ಹುರಳಿಯನ್ನು ಅಂತರ ಬೇಸಾಯ ಕ್ರಮದಲ್ಲಿ ಬೆಳೆಯುತ್ತಿದ್ದಾರೆ. ತೋಟಗಾರಿಕಾ ಬೆಳೆಗಳಾದ ಶುಂಠಿ, ಬಾಳೆ, ಮಾವು, ಬದನೆ ಬೆಳೆಯುತ್ತಿದ್ದಾರೆ.

ತಮ್ಮ ಜಮೀನಿನ ಅಂಚಿನಲ್ಲಿ ಅರಣ್ಯ ಗಿಡಗಳಾದ ಶ್ರೀಗಂಧ, ಬೇವು, ರಕ್ತಚಂದನ ಹಾಗೂ ಮೇವಿನ ಬೆಳೆಗಳಾದ ಕುದುರೆ ಮೆಂತ್ಯೆ, ನೇಪಿಯರ್ ಬೆಳೆಯುತ್ತಿದ್ದಾರೆ. ತೋಟಗಾರಿಕೆಯಲ್ಲಿ ಅತ್ಯಾದುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಇವರು ಕೃಷಿ ಹೊಂಡ, ರಸಾವರಿ ಘಟಕಗಳು, ಎರೆಹುಳು ಗೊಬ್ಬರ ಘಟಕಗಳನ್ನು ನಿರ್ಮಿಸಿ ಸಾವಯವ ಪದ್ಧತಿಯಲ್ಲಿ ಕೃಷಿಯನ್ನು ಕೈಗೊಂಡಿರುತ್ತಾರೆ. ವಿನೂತನ ತಂತ್ರಜ್ಞಾನವಾದ ಮೊಬೈಲ್ ಚಾಲಿತ ಬೋರ್‌ವೆಲ್ ಇದರ ಜೊತೆಗೆ ಟಿಲ್ಲರ್ ಆಧಾರಿತ ಕೂರಿಗೆ, ಸಂರಕ್ಷಣಾ ಉಪಕರಣಗಳನ್ನು ತಾವೇ ತಯಾರಿಸಿ ತಮ್ಮ ಜಮೀನಿನಲ್ಲಿ ಉಪಯೋಗಿಸುತ್ತಿದ್ದಾರೆ.

ಪಶುಸಂಗೋಪನೆಯಲ್ಲೂ ಇವರು ಎತ್ತಿದ ಕೈ, ಹಸು, ಕುರಿ, ಕೋಳಿ ಮತ್ತು ಮೀನು ಸಾಕಣೆಯಲ್ಲಿ ನಿರತರಾಗಿದ್ದು, ಇದರ ಜೊತೆಗೆ ಗಿನಿ ಪಿಗ್ ಸಾಕಣೆ (ಇಲಿಯ ಕುಟುಂಬಕ್ಕೆ ಸೇರಿದ) ಮಾಡಿ ಉತ್ತಮ ಲಾಭವನ್ನು ಮಾಡುತ್ತಿದ್ದಾರೆ. ಹಾಲಿನ ಉತ್ಪಾದನೆಯಿಂದ ವಾರ್ಷಿಕವಾಗಿ ಒಂದು ಲಕ್ಷ ಹಾಗೂ ಕುರಿ, ಕೋಳಿ, ಗಿನಿ ಪಿಗ್ ಮತ್ತು ಮೀನು ನಿಂದ ವಾರ್ಷಿಕವಾಗಿ ಅರು ಲಕ್ಷ ಆದಾಯವನ್ನು ಗಳಿಸುತ್ತಿದ್ದಾರೆ. ಕೃಷಿ ಹಾಗೂ ಪಶುಸಂಗೋಪನೆ ತ್ಯಾಜ್ಯವನ್ನು ಸಾವಯವ ಗೊಬ್ಬರ ಹಾಗೂ ಎರೆ ಗೊಬ್ಬರ ತಯಾರಿಕೆಯಲ್ಲಿ ಬಳಸುತ್ತಿದ್ದು, ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆಯ ನಿರ್ವಹಣೆಯನ್ನು ಕಡಿಮೆ ವೆಚ್ಚದಲ್ಲಿ ಕೈಗೊಂಡಿದ್ದಾರೆ.

ಕೃಷಿ, ತೋಟಗಾರಿಕೆ ಹಾಗೂ ಪಶುಸಂಗೋಪನಾ ಇಲಾಖೆ ಅಧಿಕಾರಿಗಳು ಹಾಗೂ ಕೆ.ವಿ.ಕೆ.ಯ ವಿಜ್ಞಾನಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸಕಾಲಿಕ ಮಾಹಿತಿ ಹಾಗೂ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ರೇಡಿಯೋ, ಟಿವಿ, ಪತ್ರಿಕೆ ಹಾಗೂ ದೂರವಾಣಿಗಳಿಂದ ಅಗತ್ಯ ಕೃಷಿ ಮಾಹಿತಿಯನ್ನು ಪಡೆಯುತ್ತಿದ್ದಾರೆ. ಉತ್ತಮ ರೈತ ಮುಂದಾಳುವಾಗಿರುವ ಶ್ರೀ. ಶಿವಕುಮಾರ್‌ರವರು ಸಾರ್ವಜನಿಕ ಜೀವನದಲ್ಲೂ ಸ್ನೇಹಪರವಾಗಿದ್ದು, ಇತರ ರೈತ ಬಾಂಧವರಿಗೆ ಕೃಷಿ ಮಾಹಿತಿ ನೀಡಿ ಉತ್ತೇಜಿಸುತ್ತಿದ್ದಾರೆ.







# <u>ತುಮಕೂರು ಜಿಲ್ಲೆ</u>



ಕುಮಾರಿ ಅರುಣ ಆರ್
ಕೋಂ ಲೆ. ರಾಜನ್ನ
ಯರಬಳ್ಳಿ, ಮಂಚಳದೊರೆ ಗ್ರಾಮ,
ಹಾಗಲವಾಡಿ ಹೋಬಳಿ, ಗುಬ್ಬಿ ತಾ
ತುಮಕೂರು ಜಿಲ್ಲೆ
ದೂ:

ಕುಮಾರಿ ಅರುಣ ಆರ್ ತುಮಕೂರು ಜಿಲ್ಲೆಯ, ಗುಬ್ಬಿ ತಾಲ್ಲೂಕಿನ ಯರಬಳ್ಳಿ ಗ್ರಾಮದ ಪ್ರಗತಿಪರ ಯುವ ರೈತ ಮಹಿಳೆಯಾಗಿದ್ದು, ಕುಟುಂಬದ ನಿರ್ವಹಣೆಯ ಜೊತೆಗೆ ಕಳಪೆ ನಿರ್ವಹಣೆ ಅಂತದಲ್ಲಿದ್ದ ತಮ್ಮ 4 ಎಕರೆ ಜಮೀನನ್ನು ಸುಧಾರಣೆ ಮಟ್ಟ ತಲುಪಲು ಪ್ರಮುಖ ಕಾರಣಕರ್ತರಾಗಿರುತ್ತಾರೆ. ತಮ್ಮ ಜಮೀನಿನಲ್ಲಿ ಕೃಷಿ ಮತ್ತು ಉಪಕಸುಬುಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ಇವರು ತಮ್ಮ ಜಮೀನಿನಲ್ಲಿ ಬೆಳೆಗಳಾದ ಅಲಸಂಧೆ, ಹೆಸರು, ಭತ್ತ, ಕಡಲೇಕಾಯಿ, ಅಡಕೆ, ತೆಂಗು, ಕಾಯಿಮೆಣಸು, ಬಾಳೆ, ಹೂ, ತರಕಾರಿಗಳು ಹಾಗೂ ಏಲಕ್ಕಿ ಬೆಳೆಯುತ್ತಿದ್ದಾರೆ. ಕೃಷಿಯ ಜೊತೆಗೆ ಉಪಕಸುಬುಗಳಾದ ಹಸು, ಕುರಿ, ಮೇಕೆ ಮತ್ತು ಕೋಳಿ ಸಾಕಣೆ ಮಾಡುತ್ತಿದ್ದಾರೆ. ರೇಷ್ಮೆ ಬೆಳೆಯುವುದು ವ್ಯವಸಾಯದ ಒಂದು ಮುಖ್ಯ ಅಂಗವಾಗಿದೆ. ಇವುಗಳ ಜೊತೆಜೇನು ಸಾಕಣೆ, ಅರಣ್ಯ ಕೃಷಿ ಹಾಗೂ ಮೇವು ಬೆಳೆಗಳಾದ ಜೋಳ, ನೇಪಿಯಾರ್, ಕೊರಲೆಯನ್ನು ಬೆಳೆಯುತ್ತಿದ್ದಾರೆ. ಇವರು ನೀರಿನ ಸದ್ಬಳಕೆಗಾಗಿ ಕೃಷಿ ಹೊಂಡ ನಿರ್ಮಿಸಿಕೊಂಡು ಮಳೆ ನೀರನ್ನು ಸಂಗ್ರಹಿಸಿ ಬೆಳೆಗಳಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಮೂಲಕ ಮಿತವಾಗಿ ಬಳಸುತ್ತಿದ್ದಾರೆ. ಇವರು ನಿಯಮಿತವಾಗಿ ಮಣ್ಣಿನ ಪರೀಕ್ಷೆ ಮಾಡಿಸಿ ಅಗತ್ಯತೆಗೆ ಅನುಸಾರ ಮಣ್ಣಿಗೆ ಸಾವಯವ ಹಾಗೂ ಜೈವಿಕ ಗೊಬ್ಬರಗಳನ್ನು ನೀಡಿ ಮಣ್ಣಿನ ಫಲವತ್ತತೆಯನ್ನು ನಿರ್ವಹಿಸುತ್ತಿದ್ದಾರೆ. ಅಲ್ಲದೇ ಬೆಳೆಗಳಿಗೂ ರೋಗ ಮತ್ತು ಪೀಡೆ ನಿರ್ವಹಣೆಗಾಗಿ ಜೈವಿಕ ವಿಧಾನಗಳಾದ ಮೋಹಕ ಬಲೆ, ಹಳದಿ ಅಂಟಿನ ಪಟ್ಟಿ ಮತ್ತು ಜೀವಾಮೃತ ತಯಾರಿಸಿ ಬಳಸುವುದರ ಮೂಲಕ ಸಾವಯವ ಕೃಷಿಗೆ ಹೆಚ್ಚು ಆದ್ಯತೆ ನೀಡಿದ್ದಾರೆ.

ಇವರು ರೇಷ್ಮೆ ಕೃಷಿಯಲ್ಲೂ ಕೂಡ ಹೆಚ್ಚಿನ ಆಸಕ್ತಿ ಹೊಂದಿದ್ದು, ವೈಜ್ಞಾನಿಕ ಪದ್ಧತಿಯಲ್ಲಿ ರೇಷ್ಮೆ ಕೃಷಿ ನಡೆಸಿ ಒಳ್ಳೆಯ ಇಳುವರಿ ಪಡೆಯುತ್ತಿದ್ದಾರೆ. ಇವರು ಟ್ರಾಕ್ಟರ್, ಸಿಂಪರಣಾ ಯಂತ್ರ, ರೋಟೋವೆಟರ್, ನೇಗಿಲು ಮುಂತಾದ ಯಂತ್ರಗಳನ್ನು ಬಳಸಿ ಸುಲಭವಾಗಿ ಕೃಷಿ ಕೆಲಸಗಳನ್ನು ನಿರ್ವಹಿಸುವ ಮೂಲಕ ಕಾರ್ಮಿಕರ ಕೊರತೆಯನ್ನು ನೀಗಿಸಿಕೊಂಡಿದ್ದಾರೆ.

ಇವರು ಬೆಳೆದ ಬೆಳೆಗಳನ್ನು ಶೇಖರಿಸಿ, ಗ್ರೇಡಿಂಗ್ ಮಾಡಿ ತಾವೇ ಮಾರಾಟ ಮಾಡಿ ಉತ್ತಮ ಲಾಭ ಪಡೆಯುತ್ತಿದ್ದಾರೆ. ಹೀಗೆ ಕುಮಾರಿ ಅರುಣರವರು, ಪುರುಷರಿಲ್ಲದ ಮನೆ ಎಂದು ದೃತಿಗೆಡೆದೆ ಕೃಷಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಬರುವ ಆದಾಯದಿಂದ ಕುಟುಂಬವನ್ನು ನಿರ್ವಹಿಸಿ ಸಂತೃಪ್ತಿ ಜೀವನ ನಡೆಸುತ್ತಿದ್ದು, ಇವರು ತಾಲ್ಲೂಕಿನ ಇತರೆ ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

ಇವರು ಕೃಷಿ ಇಲಾಖೆ, ರೇಷ್ಮೆ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳೊಂದಿಗೆ ಸಂಪರ್ಕ ಹೊಂದಿ ಅವರ ಸಲಹೆ ಸೂಚನೆಗಳಂತೆ ಕೃಷಿ ಪದ್ಧತಿಗಳನ್ನು ಕಾಲಕಾಲಕ್ಕೆ ಅಳವಡಿಸಿಕೊಂಡು ವಾರ್ಷಿಕ 10 – 12 ಲಕ್ಷ ಲಾಭವನ್ನು ಕೃಷಿಯಲ್ಲಿ ಪಡೆಯುತ್ತಿದ್ದಾರೆ.









# ತುಮಕೂರು ತಾಲ್ಲೂಕು



**ಶ್ರೀ ಶರತ್ ರಾಜ್ ಟಿ.ವಿ ಬಿನ್ ಕೆಂಪರಾಜು**
**ಮುತ್ಸಂದ್ರ, ಸ್ವಾಲದೇನಹಳ್ಳಿ ಗ್ರಾಮ,**
**ತುಮಕೂರು ತಾಲ್ಲೂಕು,**
**ತುಮಕೂರು ಜಿಲ್ಲೆ**
**ದೂ:**

ಶ್ರೀ ಶರತ್ ರಾಜ್ ಟಿ.ವಿ ಬಿನ್ ಕೆಂಪರಾಜುರವರು ಸ್ನಾತಕೊತ್ತರ ಪದವಿಧರದಾಗಿದ್ದು ಪ್ರಖ್ಯಾತ ಕಂಪನಿಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದರು. ತಂದೆಯ ಅನಾರೋಗ್ಯದ ಕಾರಣದಿಂದಾಗಿ ತಂದೆಗೆ ಕೃಷಿಯಲ್ಲಿ ನೆರವಾಗಲು ಬಂದು ಈಗ ಪೂರ್ಣ ಪ್ರಮಾಣದ ರೈತನಾಗಿ ಹೊರಹೊಮ್ಮಿ ಕೃಷಿಯಲ್ಲಿ ಸಾಧನೆ ಮಾಡಬೇಕೆಂಬ ನಿಟ್ಟಿನಲ್ಲಿ ಇತರೆ ಯುವ ರೈತರಿಗೂ ಮಾದರಿಯಾಗಿದ್ದಾರೆ. ತಮ್ಮ 9 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ಜೋಳ, ಅಲಸಂಧೆ ಹಾಗೂ ತೊಗರಿ ಬೆಳೆಗಳನ್ನು, ತೋಟಗಾರಿಕಾ ಬೆಳೆಗಳಾದ ಅಡಿಕೆ, ತೆಂಗು, ನುಗ್ಗೆ, ಬಾಳೆ ಹಾಗೂ ಕರಿಬೇವು ಜೊತೆಗೆ ರೇಷ್ಮೆ ಕೃಷಿಯನ್ನು ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಂಡು, ಕೃಷಿ ಉತ್ಪನ್ನ ಮಾರುಕಟ್ಟೆ, ತುಮಕೂರಿನಲ್ಲಿ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದಾರೆ. ಅರಣ್ಯ ಗಿಡಗಳಾದ ಶ್ರೀಗಂಧ, ಬೇವು, ತೇಗ, ಹಲಸು, ಎಲ್ಲಿಕಾಯಿ ಬೆಳೆಯುತ್ತಿದ್ದಾರೆ. ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಅಂತರ ಮತ್ತು ಮಿಶ್ರ ಬೆಳೆ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಜೈವಿಕ ಗೊಬ್ಬರಗಳು, ಕೀಟ ಹಾಗೂ ರೋಗ ನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳನ್ನು ಬಳಸುತ್ತಿದ್ದಾರೆ.

ಇವರು ಹೈನುಗಾರಿಕೆಗೂ ಹೆಚ್ಚಿನ ಆದ್ಯತೆ ನೀಡಿದ್ದು, 10 ಹಸು ಹಾಗೂ 3 ಎಮ್ಮೆಗಳಿದ್ದು, ದಿನಕ್ಕೆ 150 ಲೀ. ಹಾಲು ಉತ್ಪಾದಿಸುವ ಮೂಲಕ ಆರ್ಥಿಕವಾಗಿ ಹೆಚ್ಚಿನ ಆದಾಯವನ್ನು ಪಡೆಯುತ್ತಿದ್ದಾರೆ. ಇದರ ಜೊತೆ ಕುರಿ ಹಾಗೂ ಮೀನು ಸಾಕಣೆಯಲ್ಲೂ ಕೂಡ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ. ಇವರು ಮಣ್ಣು ಮತ್ತು ನೀರು ಸಂರಕ್ಷಣೆ ಸಲುವಾಗಿ ಕೃಷಿ ಹೊಂಡ ನಿರ್ಮಿಸಿದ್ದು, ಜೊತೆಗೆ ಬದುಗಳ ನಿರ್ಮಾಣ ಮತ್ತು ಆರಣ್ಯ ಗಿಡ ಬೆಳೆಸಿದ್ದು ಮಳೆ ನೀರನ್ನು ಇಂಗಿಸುವಂತೆ ಮಾಡಲು ಬಸಿಗಾಲಿವೆಯನ್ನು ನಿರ್ಮಿಸಿರುತ್ತಾರೆ. ಕೃಷಿ ಯಂತ್ರೋಪಕರಣಗಳಾದ ಟಿಲ್ಲರ್, ಕಲ್ಟಿವೇಟರ್ ಮತ್ತು ಟ್ರಾಕ್ಟರ್ ಚಾಲಿತ ರೋಟೋವೇಟರ್ ಹೊಂದಿದ್ದಾರೆ. ಇವರು ನೂತನ ಕೃಷಿ ತಂತ್ರಜ್ಞಾನಗಳನ್ನು ನೆರೆ ಹೊರೆಯ ರೈತರಿಗೂ ಪರಿಚಯಿಸಿದ್ದು, ಗ್ರಾಮದ ಯುವ ರೈತರಿಗೆ ಮಾದರಿಯಾಗಿದ್ದಾರೆ.





# ತುಮಕೂರು ತಾಲ್ಲೂಕು



ಶ್ರೀಮತಿ ಪುಷ್ಪಲತಾ ಜಿ
ಕೋಂ ನಾಗರಾಜು ಎಂ. ಎಲ್.
ಮುತ್ಸಂದ್ರ, ಸ್ವಾಲದೇನಹಳ್ಳಿ ಗ್ರಾಮ,
ತುಮಕೂರು ತಾಲ್ಲೂಕು,
ತುಮಕೂರು ಜಿಲ್ಲೆ
ದೂ:

ಶ್ರೀಮತಿ ಪುಷ್ಪಲತಾ ರವರು ತುಮಕೂರು ತಾಲ್ಲೂಕಿನ ಮುತ್ಸಂದ್ರ ಗ್ರಾಮದವರಾಗಿದ್ದು, ಕೃಷಿಯಲ್ಲಿ ತಮ್ಮನ್ನು ತಾವು ನಿರಂತರವಾಗಿ ತೊಡಗಿಕೊಂಡಿದ್ದಾರೆ. ಪಿ.ಯು.ಸಿ. ವರಗೆ ವಿದ್ಯಾಭ್ಯಾಸ ಮಾಡಿರುವ ಇವರು ತಮ್ಮ ಜಮೀನಿನಲ್ಲಿ ರಾಗಿ, ರೇಷ್ಮೆ, ತೆಂಗು, ವಿಳ್ಯೇದೆಲೆ, ಮೂಸಂಬಿ, ಅಡಕೆ, ಚಕ್ಕೋಟ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರ ಜೊತೆ ಉಪಕಸುಬಾಗಿ ಹೈನುಗಾರಿಕೆ, ಕುರಿ, ಕೋಳಿ, ಮೀನು ಸಾಕಾಣೆಯನ್ನು ಕೈಗೊಂಡಿರುತ್ತಾರೆ. ಈ ರೀತಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಪದ್ದತಿಗಳನ್ನು ಒಳಗೊಂಡಂತೆ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳೊಡನೆ ನಿರಂತರ ಸಂಪರ್ಕದಲ್ಲಿದ್ದು ಅವರಿಂದ ಪಡೆದ ತಾಂತ್ರಿಕ ಮಾಹಿತಿಗಳನ್ನು ತಮ್ಮ ಜಮೀನಿನಲ್ಲಿ ಅನುಸರಿಸುವುದರ ಜೊತೆಗೆ ಅವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಇತರ ರೈತರುಗಳಿಗೂ ತಿಳಿಸುತ್ತಾರೆ. ಆಧುನಿಕ ಯಂತ್ರೋಪಕರಣಗಳನ್ನು (ಕೆಳವೊಂದು ಗುತ್ತಿಗೆಗೆ) ಬಳಕೆ ಮಾಡುತ್ತಿದ್ದು ಉತ್ತಮ ಆದಾಯ ಪಡೆಯುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಜೈವಿಕ ಗೊಬ್ಬರಗಳನ್ನು ಬಳಕೆ ಮಾಡುತ್ತಿದ್ದು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ಹಾಗೆಯೇ ಭೂಮಿಯನ್ನು ಆಳವಾಗಿ ಉಳುಮೆ ಮಾಡಿ ಸಮರ್ಪಕ ಬದುಗಳನ್ನು ನಿರ್ಮಿಸಿ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದಾರೆ.

ಶ್ರೀಮತಿ ಪುಷ್ಪಲತಾ ರವರು ಮಣ್ಣು ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರಗಳು ಮತ್ತು ಜೈವಿಕ ಗೊಬ್ಬರಗಳನ್ನು ಬಳಕೆ ಮಾಡುತ್ತಿದ್ದು ರೇಷ್ಮೆ ಕೃಷಿಯಲ್ಲಿನ ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿ ಅದನ್ನು ಕಾಂಪೋಷ್ಟ್ ಗೊಬ್ಬರವನ್ನಾಗಿ ಪರಿವರ್ತಿಸಿ ತಮ್ಮ ಜಮೀನಿನಲ್ಲಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ಪಶುಪಾಲನೆಯನ್ನು ಕೈಗೊಂಡು ಹಸು, ಕುರಿ, ಕೋಳಿ, ಮೀನು ಸಾಕಿದ್ದು ಇವುಗಳಿಂದಲೂ ಉತ್ತಮ ಆದಾಯ ಪಡೆಯುವುದರ ಜೊತೆಗೆ ಇವುಗಳ ತಾಜ್ಯಗಳನ್ನು ತಮ್ಮ ಜಮೀನಿನಲ್ಲಿ ಬಳಕೆ ಮಾಡುತ್ತಿದ್ದು, ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಹೀಗೆ ಸುಧಾರಿತ ಕ್ರಮಗಳನ್ನು ಅನುಸರಿಸುತ್ತಿದ್ದು ಮಾದರಿ ರೈತ ಮಹಿಳೆ ಎನಿಸಿಕೊಂಡಿದ್ದಾರೆ.





# ಪಾವಗಡ ತಾಲ್ಲೂಕು



ಶ್ರೀ ದಾಸೇಗೌಡ ಎಂ. ಬಿನ್ ಮುದ್ದನ್ನ
ಮದ್ದೇವು ಗ್ರಾಮ, ನಿಡಗಲ್ ಹೋಬಳಿ
ಪಾವಗಡ ತಾಲ್ಲೂಕು,
ತುಮಕೂರು ಜಿಲ್ಲೆ
ದೂ:

ಶ್ರೀಯುತ ದಾಸೇಗೌಡರವರು ಉತ್ಸಾಹಿ ಯುವ ರೈತರಾಗಿದ್ದು, ತಮ್ಮ ಬಿ.ಕಾಂ. ಪದವಿ ಮುಗಿಸಿದ ನಂತರ ಕೃಷಿಯನ್ನು ಉದ್ಯೋಗವನ್ನಾಗಿ ಅಳವಡಿಸಿಕೊಂಡಿದ್ದಾರೆ. ಇವರು ಒಟ್ಟಾಗಿ 2 ಎಕರೆ ಖುಷ್ಕಿ ಮತ್ತು 3 ಎಕರೆ ತರಿ ಭೂಮಿಯನ್ನು ಹೊಂದಿದ್ದು, ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇವರು ತಮ್ಮ ಜಮೀನಿನಲ್ಲಿ ಕೃಷಿ ಬೆಳೆಗಳಾದ ಶೇಂಗಾ ತೊಗರಿ ಹಾಗೂ ನವಣೆ ಬೆಳೆಗಳಲ್ಲಿ ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ ಹಾಗೂ ಎಲ್ಲಾ ಬೆಳೆಗಳಲ್ಲಿ ಸುಧಾರಿತ ತಳಿಗಳನ್ನು ಅಳವಡಿಸಿಕೊಂಡಿದ್ದಾರೆ.

ಇವರು ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ, ದಾಳಿಂಬೆ ಬೆಳೆಗಳ ಜೊತೆಗೆ ಅರಣ್ಯ ಗಿಡಗಳಾದ ಶ್ರೀಗಂಧ, ಮಹಗನಿ, ತೇಗ, ಸಿಲ್ವರ್ ಹಾಗೂ ರಕ್ತಚಂದನ ಬೆಳೆಯುತ್ತಿದ್ದು, ಕೃಷಿ ಚಟುವಟಿಕೆ ಜೊತೆಗೆ ಪೂರಕ ಕಸುಬಾದ ಕುರಿ, ಕೋಳಿ ಮತ್ತು ಎಮ್ಮೆ ಸಾಕಣೆ ಕೈಗೊಂಡಿದ್ದಾರೆ. ನೀರಿನ ಸದ್ಬಳಕೆಗಾಗಿ ತಮ್ಮ ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪದ್ಧತಿ ಅಳವಡಿಸುವುದರ ಜೊತೆಗೆ ಬೀಜೋಪಚಾರ, ಆಕರ್ಶಕ ಬಲೆಗಳ ಬಳಕೆ ಮತ್ತು ಮಿಶ್ರ ಬೆಳೆ ಪದ್ಧತಿಗಳನ್ನು ಬಳಸಿ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬಂದಿರುತ್ತದೆ. ಬೆಳೆಗಳನ್ನು ಕಟಾವು ಮಾಡಲು ಬಾಡಿಗೆ ಆಧಾರಿತ ಕಟಾವು ಮತ್ತು ಒಕ್ಕಣೆ ಯಂತ್ರಗಳನ್ನು ಬಳಸುತ್ತಿದ್ದಾರೆ. ಕೃಷಿಗೆ ಸಂಬಂಧಿತ ಅಗತ್ಯ ಮಾಹಿತಿ ಪಡೆಯಲು ಕೃಷಿ ಸಂಶೋಧನ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳೊಡನೆ ನಿರಂತರ ಸಂಪರ್ಕ ಹೊಂದಿರುತ್ತಾರೆ. ಕೃಷಿಯು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಿದ್ದು, ಇದನ್ನೇ ನಂಬಿರುವ ಇವರು ಇತರೆ ಯುವ ಕೃಷಿಕರಿಗೆ ಮಾದರಿಯಾಗಿದ್ದಾರೆ.





# <u>ಪಾವಗಡ ತಾಲ್ಲೂಕು</u>

**ಶ್ರೀಮತಿ ಭಾಗ್ಯ ಶ್ರೀ ಸಿ.ಆರ್.**
**ಕೋಂ ಜಿ. ಅನಿಲ್ ಕುಮಾರ್**
**ಗುಜ್ಜನಾಡು ಗ್ರಾಮ, ನಿಡಗಲ್ ಹೋಬಳಿ**
**ಪಾವಗಡ ತಾಲ್ಲೂಕು,**
**ತುಮಕೂರು ಜಿಲ್ಲೆ**
**ದೂ:**



**ಶ್ರೀಮತಿ ಭಾಗ್ಯ ಶ್ರೀ ಸಿ.ಆರ್. ರವರು ಶ್ರೀ ಅನಿಲ್ ಕುಮಾರ್ ರವರ ಪತ್ನಿಯಾಗಿದ್ದು, ಕೌಟುಂಬಿಕ ವೃತ್ತಿಯಾದ ಕೃಷಿಯಲ್ಲಿ ಆಸಕ್ತಿಯಿಂದ ತೊಡಗಿಕೊಂಡಿದ್ದಾರೆ. ತಮ್ಮ 26 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿಯನ್ನು ಅಳವಡಿಸಿಕೊಂಡಿದ್ದು, ಆಹಾರ ಬೆಳೆಗಳಾದ ರಾಗಿ, ಮುಸುಕಿನ ಜೋಳ, ಶೇಂಗಾ ಬೆಳೆಯುತ್ತಿದ್ದಾರೆ. ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ, ಮಾವು, ಹಾಗೂ ಟೊಮ್ಯಾಟೊ ಬೆಳೆಗಳನ್ನು ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಯೊಂದಿಗೆ ಉತ್ತಮ ಗುಣಮಟ್ಟದ ಇಳುವರಿಯನ್ನು ಪಡೆದು ಅಧಿಕ ಲಾಭ ಗಳಿಸುತ್ತಿದ್ದಾರೆ. ಹೈನುಗಾರಿಕೆಯಲ್ಲಿ ಎಂಟು ಮಿಶ್ರ ಹಸುಗಳು ಹಾಗೂ ಎರಡು ದೇಶಿ ಎಮ್ಮೆಗಳಿಂದ ಪ್ರತಿನಿತ್ಯ 120 ಲೀ. ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ಇದರ ಜೊತೆ ರೇಷ್ಮೆ ಹುಳು ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಕುರಿ ಸಾಕಾಣಿಯನ್ನು ಮಾಡುತ್ತಿದ್ದಾರೆ. ಅದರಲ್ಲೂ ಆಫ್ರಿಕಾ ದೇಶದ ಕುರಿ ತಳಿಗಳಾದ 70 ಡಾರ್ಪರ್ ಕುರಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಮಾಡುತ್ತಿದ್ದು 5–10 ಕೃಷಿ ಕಾರ್ಮಿಕರಿಗೆ ಉದ್ಯೋಗಾವಕಾಶವನ್ನು ಒದಗಿಸಿರುತ್ತಾರೆ. ಹೈನುಗಾರಿಕೆಯಲ್ಲಿ ಪೂರಕವಾಗಿ ನೇಪಿಯಾರ್, ಸುಬ್ಬಾಬುಲ್, ಅಗಸೆ, ಮಲ್ಟಿಕಟ್ (ಸಿ.ಒ.ಎಫ್.ಎಸ್. 29) ಬೇಲಿ ಮಸಾಲೆಯನ್ನು ಬೆಳೆಯುತ್ತಿದ್ದಾರೆ.**

**ಕೃಷಿ ಇಲಾಖೆಯ ಅನುದಾನದೊಂದಿಗೆ ಬೃಹತ್ ಕೃಷಿ ಹೊಂಡ, ಸಿಲ್ಕ್ ಟ್ರಾಪ್ ಹಾಗೂ ಇಂಗು ಗುಂಡಿಗಳನ್ನು ನಿರ್ಮಿಸಿಕೊಂಡು ಹನಿ ನಿರಾವರಿ ಪದ್ಧತಿಯಲ್ಲಿ ಸೂಕ್ತ ನೀರಿನ ನಿರ್ವಹಣೆಯನ್ನು ಮಾಡಿರುತ್ತಾರೆ. ಸಮಗ್ರ ಪೀಡೆ ನಿರ್ವಹಣೆ ತಾಂತ್ರಿಕತೆಯನ್ನು ಕೃಷಿ ತಜ್ಞರ ಸಹಾಯದಿಂದ ಪಡೆದುಕೊಂಡು ಉತ್ತಮ ಪರಿಣಾಮವನ್ನು ಕಂಡುಕೊಂಡಿದ್ದಾರೆ. ಇದಲ್ಲದೆ ತಮ್ಮ ಜಮೀನಿನಲ್ಲಿ ಅರಣ್ಯ ಗಿಡಗಳಾದ ಶ್ರೀಗಂಧ, ಬೇವು, ಹೆಬ್ಬೇವು, ತೇಗ, ಸಿಲ್ವರ್ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಶ್ರೀಮತಿಯವರು ಹಲವಾರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದು, ಕೃಷಿ ಸಂಶೋಧನ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳೊಡನೆ ನಿರಂತರ ಸಂಪರ್ಕದಲ್ಲಿದ್ದು, ಹೆಚ್ಚಿನ ಕೃಷಿ ತಾಂತ್ರಿಕತೆಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಇತರೆ ರೈತರುಗಳಿಗೂ ಅದರ ಬಗ್ಗೆ ಮಾಹಿತಿ ನೀಡುತ್ತಾ ಮಾದರಿ ಹಾಗೂ ಪ್ರಗತಿಪರ ರೈತ ಮಹಿಳೆಯನಿಸಿಕೊಂಡಿದ್ದಾರೆ.**





# <u>ಚಿಕ್ಕನಾಯಕನಹಳ್ಳಿ ತಾಲ್ಲೂಕು</u>

**ಷಣ್ಮುಖ ಕೆ ಬಿನ್ ಕಾಟಯ್ಯ**
**ತಮ್ಮಡಿಹಳ್ಳಿ, ಬಿಳಿಕಲ್ಲುಗೊಲ್ಲರಹಟ್ಟಿ**
**ಹುಳಿಯಾರು ಹೋಬಳಿ,ಚಿಕ್ಕನಾಯಕನಹಳ್ಳಿ ತಾಲ್ಲೂಕು**
**ತುಮಕೂರು ಜಿಲ್ಲೆ, ಪಿನ್ ಕೋಡ್ ನಂ. 572218**
**ಮೊ.ನಂ. 9980320309 & 8073009418**



ಷಣ್ಮುಖ ಕೆ ಬಿನ್ ಕಾಟಯ್ಯ ರವರು 5ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದು ವ್ಯವಸಾಯದಲ್ಲಿ ಸಾಧನೆ ಮಾಡಬೇಕೆಂಬ ನಿಟ್ಟಿನಲ್ಲಿ ಇತರರಿಗೆ ಮಾದರಿ ರೈತರಾಗಿರುತ್ತಾರೆ. ತಮ್ಮ 35 ಎಕರೆ ಜಮೀನಿನಲ್ಲಿ ರಾಗಿ, ತೊಗರಿ, ಉದ್ದು, ಹೆಸರು, ಅಲಸಂದೆ, ಬಾಳೆ, ತೆಂಗು, ಟೊಮ್ಯಾಟೊ, ಅಡಿಕೆ, ವಿಳೆದೆಲೆ ಬೆಳೆಗಳಲ್ಲಿ ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಕೃಷಿ ವಿಜ್ಞಾನ ಕೇಂದ್ರ ಬಿದರೇಗುಡಿಕಾವಲು, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಿಜ್ಞಾನಿಗಳ ವೈಜ್ಞಾನಿಕ ಸಲಹೆಯ ಮೇರೆಗೆ ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೃಷಿ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಮೂಲಕ ಬೀಜೋಪಚಾರ ಮಾಡುವುದು, ಲಘು ಪೋಷಕಾಂಶಗಳ ಬಳಕೆ ಮತ್ತು ಮಣ್ಣು ಪರೀಕ್ಷೆ ಆದಾರದ ಮೇಲೆ ರಸಗೊಬ್ಬರ ಬಳಕೆಯನ್ನು ಬಳಸುತ್ತಿದ್ದಾರೆ, ರಾಗಿ ಬಿತ್ತನೆಯನ್ನು ಬೀಜ ಮತ್ತು ಗೊಬ್ಬರ ಟ್ರಾಕ್ಟರ್ ಚಾಲಿತ ಯಂತ್ರದ ಮೂಲಕ ಬಿತ್ತನೆ ಮಾಡುತ್ತಿದ್ದಾರೆ. ಟೊಮ್ಯಾಟೊ ಬೆಳೆಯನ್ನು ವೈಜ್ಞಾನಿಕವಾಗಿ ಬೆಳೆಯುತ್ತಿರುವ ಇವರು ಜೈವಿಕ ಗೊಬ್ಬರಗಳಾದ ಪಿ.ಎಸ್.ಬಿ. ಅರ್ಕ ಸೂಕ್ಷ್ಮ ಜೀವಿಗಳ ಸಂಕೀರ್ಣ, ಬೇವಿನ ಎಣ್ಣೆ, ಹಸುವಿನ ಗಂಜಲ ಬಳಸಿ ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ. ಹಸಿರೆಲೆ ಗೊಬ್ಬರದ ಗಿಡಗಳು, ಎರೆಹುಳು ತೊಟ್ಟಿ ಮತ್ತು ಬಯೋಡೈಜಸ್ಟರ್ ಘಟಕ ನಿರ್ಮಿಸಿಕೊಂಡು ಸಾವಯವ ಕೃಷಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಅಡಿಕೆ ಬೆಳೆಯಲ್ಲಿ ವಿಳ್ಯದೆಲೆ ಅಂಬನ್ನು ಬೆಳೆಯುವುದರ ಮೂಲಕ ಹೆಚ್ಚಿನ ಲಾಭ ಪಡೆಯುತ್ತಿದ್ದು ಇತರೆ ರೈತರಿಗೆ ಮಾದರಿಯಾಗಿದ್ದಾರೆ.

ನೀರಿನ ಸಮರ್ಪಕ ಬಳಕೆಗಾಗಿ ತಮ್ಮ ಜಮೀನಿನಲ್ಲಿ ಹನಿ ನೀರಾವರಿ ಕೈಗೊಂಡಿರುತ್ತಾರೆ. ಹೈನುಗಾರಿಕೆಯನ್ನು ಮಾಡುತ್ತಿರುವ ಇವರು ಎರಡು ನಾಟಿ ಹಸು, ಎಮ್ಮೆ, ಐವತ್ತು ನಾಟಿ ಕುರಿ ಮತ್ತು ಎರಡು ನಾಟಿ ಮೇಕೆ ಸಾಕುತ್ತಿದ್ದಾರೆ ಇವುಗಳ ಗೊಬ್ಬರವನ್ನು ಅವರ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಬಳಸುತ್ತಿದ್ದಾರೆ. ಮೇವಿನ ಕೊರತೆ ನೀಗಿಸಲು ಮೇವಿನ ಬೆಳೆಗಳಾದ ನೇಪಿಯರ್ ಮತ್ತು ಕೊ–3 ಯನ್ನು ಬೆಳೆಯುತ್ತಿದ್ದು ಬೇಸಿಗೆಯಲ್ಲಿ ಮೇವಿನ ಕೊರತೆಗೆ ಪರ್ಯಾಯವಾಗಿದೆ. ಕೃಷಿ ಹಾಗೂ ಅಭಿವೃದ್ಧಿ ಇಲಾಖೆಗಳ ಜೊತೆ ನಿರಂತರ ಸಂಪರ್ಕ ಹೊಂದಿದ್ದು, ಅಧುನಿಕ ಕೃಷಿ ಕೈಗೊಳ್ಳುತ್ತಿದ್ದಾರೆ. ತಮ್ಮ ಹೊಲದಲ್ಲಿ ಕಾಣಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗೆ ಟ್ರೈಕೋಡರ್ಮಾ ಜೈವಿಕ ಶಿಲೀಂದ್ರ ನಾಶಕ, ಬೇವಿನ ಹಿಂಡಿ, ಬೇವಿನ ಬೀಜದ ಕಶಾಯ ಹಾಗೂ ಹಸುವಿನ ಗಂಜಲ ಬಳಸಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿರುತ್ತಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ರೈತ ಅಭಿವೃದ್ಧಿ ಸಂಘಕ್ಕೆ ಇವರು ಸದಸ್ಯರಾಗಿದ್ದು ಸುಧಾರಿತ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಮತ್ತು ತಮ್ಮ ಸುತ್ತಮುತ್ತಲಿನ ರೈತರೊಂದಿಗೆ ಸಂಪರ್ಕದಲ್ಲಿದ್ದು ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದಾರೆ. ಕೃಷಿಯು ಸ್ವಾವಲಂಬಿ ಜೀವನ ನೆಡೆಸಲು ಅನುಕೂಲವಾಗಿದ್ದು, ಇದನ್ನೇ ನಂಬಿರುವ ಇವರು ಇತರೆ ಯುವ ಕೃಷಿಕರಿಗೆ ಮಾದರಿಯಾಗಿದ್ದಾರೆ.








# <u>ಚಿಕ್ಕನಾಯಕನಹಳ್ಳಿ ತಾಲ್ಲೂಕು</u>



**ಗಂಗಶ್ರೀ ಬಿ.ಕೆ ಕೋಂ ನಾಗೇಶ್ ಬಾಬು ಕೆ.ಸಿ**
**ಕಂದಿಕೆರೆ ಗ್ರಾಮ, ಹೋಬಳಿ, ಚಿ.ನಾ. ಹಳ್ಳಿ ತಾಲ್ಲೂಕು**
**ಮೊ: 9591833936**

ಶ್ರೀಮತಿ. ಮಾ ಗಂಗಶ್ರೀ ಬಿ.ಕೆ ಕೋಂ ನಾಗೇಶ್ ಬಾಬು ಕೆ.ಸಿ ರವರು ಬಿ.ಕಾಂ ಪದವಿಯನ್ನು ಪಡೆದಿರುವ ಇವರು ತಮ್ಮ 7.0 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ತೊಗರಿ, ಹೆಸರು, ಉದ್ದು, ಅಲಸಂದೆ, ಹುರುಳಿ, ಅವರೆ, ತೋಟಗಾರಿಕೆ ಬೆಳೆಗಳಾದ ತೆಂಗು ಅಡಿಕೆ ತಿಂಗಳ ಹುರುಳಿ, ಹೀರೆಕಾಯಿ, ಸೌತೆಕಾಯಿ, ಬೆಂಡೆ, ಮೆಣಸಿನಕಾಯಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಮೇವಿನ ಬೆಳೆಗಳಾದ ಮುಸುಕಿನಜೋಳ, ಒಗರು ಜೋಳ ಬೆಳೆಯುತ್ತಿದ್ದಾರೆ. ಎರಡು ಹೆಚ್.ಎಫ್, ಒಂದು ಹಳ್ಳಿಕಾರ್, ಒಂದು ಎಮ್ಮೆ ಮತ್ತು ಇಪ್ಪತ್ತು ನಾಟಿ ಕುರಿಗಳ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ, ಇದರ ಜೊತೆಗೆ ಕೃಷಿಹೊಂಡದಲ್ಲಿ ಸ್ಥಳೀಯ ಮೀನಿನ ತಳಿಯನ್ನು ಬಿಟ್ಟಿರುತ್ತಾರೆ.

ಇವರು ತಮ್ಮ ರಾಸುಗಳ ಗೊಬ್ಬರವನ್ನು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಪ್ರತಿ ವರ್ಷವೂ ಬೆಳೆಸುತ್ತಿದ್ದಾರೆ. ಕೀಟ ರೋಗನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ. ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಲಘು ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆ ಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳನ್ನು ಬಳಸುತ್ತಿದ್ದಾರೆ. ಕೃಷಿ ಉಪಕರಣಗಳಾದ ಪವರ್ ಟಿಲ್ಲರ್, ಚಾಪ್ ಕಟ್ಟರ್, ಪವರ್ ವೀಡರ್, ಟ್ರಾಕ್ಟರ್ ಬಳಸುತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕೇವಲ ಕೃಷಿಯನ್ನು ನಂಬಿ ಕೈಸುಟ್ಟವರಿಗೆ ಇವರು ಕೃಷಿ, ತೋಟಗಾರಿಕೆ, ಹೈನುಗಾರಿಕೆ ಹೀಗೆ ಹಲವಾರು ಕೃಷಿ ಉಪಕಸುಬುಗಳಲ್ಲಿ ತೊಡಗಿಸಿಕೊಂಡು ಹೆಚ್ಚು ಆದಾಯ ಗಳಿಸಲು ಸಾಧ್ಯವಾಗಿ ಇತರರಿಗೆ ಮಾದರಿಯಾಗಿದ್ದಾರೆ.

ಕೃಷಿ, ತೋಟಗಾರಿಕಾ ಅಧಿಕಾರಿಗಳು ಮತ್ತು ಕೆ.ವಿ.ಕೆ ವಿಜ್ಞಾನಿಗಳೊಂದಿಗೆ ಸಂಪರ್ಕದಲ್ಲಿದ್ದು ಇವರ ಮಾರ್ಗಸೂಚಿಯಂತೆ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಇತರೆ ರೈತ ಮತ್ತು ರೈತ ಮಹಿಳೆಯರೊಂದಿಗೆ ಸಂಪರ್ಕದಲ್ಲಿದ್ದು ತಾವು ಅನುಸರಿಸುತ್ತಿರುವ ಸುಧಾರಿತ ಬೇಸಾಯ ಕ್ರಮಗಳನ್ನು ಹಂಚಿಕೊಳ್ಳುತ್ತಿದ್ದಾರೆ.







# ಮಧುಗಿರಿ ತಾಲ್ಲೂಕು



**ಆಶೋಕ ಸಿ.ಇ. ಬಿನ್ ಈರಪ್ಪ**
**ಚಂಬೇನಹಳ್ಳಿ ಗ್ರಾಮ, ಮಧುಗಿರಿ ತಾಲ್ಲೂಕು**
**ಮೊ: 7026069198**

ಆಶೋಕ ಸಿ.ಇ. ಬಿನ್ ಈರಪ್ಪ ರವರು ಐ.ಟಿ.ಐ.ವರೆಗೆ ವ್ಯಾಸಂಗ ಮಾಡಿದ್ದು ವ್ಯವಸಾಯದಲ್ಲಿ ಸಾಧನೆ ಮಾಡಬೇಕೆಂಬ ನಿಟ್ಟಿನಲ್ಲಿ ಇತರರಿಗೆ ಮಾದರಿ ರೈತರಾಗಿರುತ್ತಾರೆ. ತಮ್ಮ 3 ಎಕರೆ ಜಮೀನಿನಲ್ಲಿ ರಾಗಿ, ತೊಗರಿ, ಉದ್ದು, ಹೆಸರು, ಅಲಸಂದೆ, ಬಾಳೆ, ತೆಂಗು, ಅಡಿಕೆ, ವಿಳೆದೆಲೆ ಬೆಳೆಗಳಲ್ಲಿ ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಕೃಷಿ ವಿಜ್ಞಾನ ಕೇಂದ್ರ ಬಿದರೇಗುಡಿಕಾವಲು, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಿಜ್ಞಾನಿಗಳ ವೈಜ್ಞಾನಿಕ ಸಲಹೆಯ ಮೇರೆಗೆ ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಅಂತರ ಮತ್ತು ಮಿಶ್ರ ಬೆಳೆ ಪದ್ದತಿಗಳನ್ನು ಅಳವಡಿಸಿಕೊಂಡಿದ್ದಾರೆ. ಭೂಮಿಯ ಫಲವತ್ತತೆಯನ್ನು ವೃದ್ದಿಸಲು ಬರುವ ತ್ಯಾಜ್ಯವನ್ನು ಬಳಸಿ ಎರೆಹುಳು ಮತ್ತು ಕೋಟ್ಟಿಗೆ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಕೃಷಿ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಮೂಲಕ ಬೀಜೋಪಚಾರ ಮಾಡುವುದು, ಲಘು ಪೋಷಕಾಂಶಗಳ ಬಳಕೆ ಮತ್ತು ಮಣ್ಣು ಪರೀಕ್ಷೆ ಆದಾರದ ಮೇಲೆ ರಸಗೊಬ್ಬರ ಬಳಕೆಯನ್ನು ಬಳಸುತ್ತಿದ್ದಾರೆ, ರಾಗಿ ಬಿತ್ತನೆಯನ್ನು ಬೀಜ ಮತ್ತು ಗೊಬ್ಬರ ಟ್ರಾಕ್ಟರ್ ಚಾಲಿತ ಯಂತ್ರದ ಮೂಲಕ ಬಿತ್ತನೆ ಮಾಡುತ್ತಿದ್ದಾರೆ. ಜೈವಿಕ ಗೊಬ್ಬರಗಳಾದ ಪಿ.ಎಸ್.ಬಿ. ಅರ್ಕ ಸೂಕ್ಷ್ಮ ಜೀವಿಗಳ ಸಂಕೀರ್ಣ, ಬೇವಿನ ಎಣ್ಣೆ, ಹಸುವಿನ ಗಂಜಲ ಬಳಸಿ ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ. ಹಸಿರೆಲೆ ಗೊಬ್ಬರದ ಗಿಡಗಳು, ಎರೆಹುಳು ತೊಟ್ಟಿ ಮತ್ತು ಬಯೋಡೈಜಸ್ಟರ್ ಘಟಕ ನಿರ್ಮಿಸಿಕೊಂಡು ಸಾವಯವ ಕೃಷಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಅಡಿಕೆ ಬೆಳೆಯಲ್ಲಿ ವಿಳ್ಯದೆಲೆ ಅಂಬನ್ನು ಬೆಳೆಯುವುದರ ಮೂಲಕ ಹೆಚ್ಚಿನ ಲಾಭ ಪಡೆಯುತ್ತಿದ್ದು ಇತರೆ ರೈತರಿಗೆ ಮಾದರಿಯಾಗಿದ್ದಾರೆ.

ನೀರಿನ ಸಮರ್ಪಕ ಬಳಕೆಗಾಗಿ ತಮ್ಮ ಜಮೀನಿನಲ್ಲಿ ಹನಿ ನೀರಾವರಿ ಕೈಗೊಂಡಿರುತ್ತಾರೆ. ಹೈನುಗಾರಿಕೆಯನ್ನು ಮಾಡುತ್ತಿರುವ ಇವರು ಎರಡು ನಾಟಿ ಹಸು, ಎಮ್ಮೆ, ಐವತ್ತು ನಾಟಿ ಕುರಿ ಮತ್ತು ಎರಡು ನಾಟಿ ಮೇಕೆ ಸಾಕುತ್ತಿದ್ದಾರೆ ಇವುಗಳ ಗೊಬ್ಬರವನ್ನು ಅವರ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಬಳಸುತ್ತಿದ್ದಾರೆ. ಮೇವಿನ ಕೊರತೆ ನೀಗಿಸಲು ಮೇವಿನ ಬೆಳೆಗಳಾದ ನೇಪಿಯರ್ ಮತ್ತು ಕೊ–3 ಯನ್ನು ಬೆಳೆಯುತ್ತಿದ್ದು ಬೇಸಿಗೆಯಲ್ಲಿ ಮೇವಿನ ಕೊರತೆಗೆ ಪರ್ಯಾಯವಾಗಿದೆ. ಕೃಷಿ ಹಾಗೂ ಅಭಿವೃದ್ದಿ ಇಲಾಖೆಗಳ ಜೊತೆ ನಿರಂತರ ಸಂಪರ್ಕ ಹೊಂದಿದ್ದು, ಅಧುನಿಕ ಕೃಷಿ ಕೈಗೊಳ್ಳುತ್ತಿದ್ದಾರೆ. ತಮ್ಮ ಹೊಲದಲ್ಲಿ ಕಾಣಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗೆ ಟ್ರೈಕೋಡರ್ಮಾ ಜೈವಿಕ ಶಿಲೀಂದ್ರ ನಾಶಕ, ಬೇವಿನ ಹಿಂಡಿ, ಬೇವಿನ ಬೀಜದ ಕಶಾಯ ಹಾಗೂ ಹಸುವಿನ ಗಂಜಲ ಬಳಸಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿರುತ್ತಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ರೈತ ಅಭಿವೃದ್ಧಿ ಸಂಘಕ್ಕೆ ಇವರು ಸದಸ್ಯರಾಗಿದ್ದು ಸುಧಾರಿತ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಮತ್ತು ತಮ್ಮ ಸುತ್ತಮುತ್ತಲಿನ ರೈತರೊಂದಿಗೆ ಸಂಪರ್ಕದಲ್ಲಿದ್ದು ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದಾರೆ. ಕೃಷಿಯು ಸ್ವಾವಲಂಬಿ ಜೀವನ ನೆಡೆಸಲು ಅನುಕೂಲವಾಗಿದ್ದು, ಇದನ್ನೇ ನಂಬಿರುವ ಇವರು ಇತರೆ ಯುವ ಕೃಷಿಕರಿಗೆ ಮಾದರಿಯಾಗಿದ್ದಾರೆ.






# ಮಧುಗಿರಿ ತಾಲ್ಲೂಕು




**ಶಾರದಮ್ಮ ಸಿ. ಕೋಂ. ವಿಜಯ ಕುಮಾರ**
**ಗಂಪಳಹಳ್ಳಿ, ಮಧುಗಿರಿ ತಾಲ್ಲೂಕು**
**ಮೊ: 9731796221, 8970737810**

ಶ್ರೀಮತಿ. ಶಾರದಮ್ಮ ಸಿ. ಕೋಂ ವಿಜಯ ಕುಮಾರ ರವರು ಬಿ.ಎ. ಪದವಿಯನ್ನು ಪಡೆದಿರುವ ಇವರು ತಮ್ಮ 6.0 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ತೊಗರಿ, ಹುರುಳಿ, ಅವರೆ, ತೋಟಗಾರಿಕೆ ಬೆಳೆಗಳಾದ ತೆಂಗು ಅಡಿಕೆ ತಿಂಗಳ ಹುರುಳಿ, ಹೀರೆಕಾಯಿ, ಸೌತೆಕಾಯಿ, ಬೆಂಡೆ, ಮೆಣಸಿನಕಾಯಿ, ರೇಷ್ಮೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೃಷಿಯ ಜೊತೆಗೆ ಹೈನುಗಾರಿಕೆ ಹಾಗೂ ಕುರಿ ಸಾಕಣಿಕೆಗೆ ಹೆಚ್ಚು ಒತ್ತು ನೀಡಿದ್ದಾರೆ. ಮೇವಿನ ಬೆಳೆಗಳಾದ ಮುಸುಕಿನಜೋಳ, ಒಗರು ಜೋಳ ಬೆಳೆಯುತ್ತಿದ್ದಾರೆ. ಎರಡು ಹೆಚ್.ಎಫ್, ಒಂದು ಹಳ್ಳಿಕಾರ್, ಒಂದು ಎಮ್ಮೆ ಮತ್ತು ಇಪ್ಪತ್ತು ನಾಟಿ ಕುರಿಗಳ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ.

ಇವರು ತಮ್ಮ ರಾಸುಗಳ ಗೊಬ್ಬರವನ್ನು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಪ್ರತಿ ವರ್ಷವೂ ಬಳಸುತ್ತಿದ್ದಾರೆ. ಕೀಟ ರೋಗನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ. ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಲಘು ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆ ಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳನ್ನು ಬಳಸುತ್ತಿದ್ದಾರೆ. ಕೃಷಿ ಉಪಕರಣಗಳಾದ ಪವರ್ ಟಿಲ್ಲರ್, ಚಾಪ್ ಕಟ್ಟರ್, ಪವರ್ ವೀಡರ್, ಟ್ರಾಕ್ಟರ್ ಬಳಸುತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕೇವಲ ಕೃಷಿಯನ್ನು ನಂಬಿ ಕೈಸುಟ್ಟವರಿಗೆ ಇವರು ಕೃಷಿ, ತೋಟಗಾರಿಕೆ, ಹೈನುಗಾರಿಕೆ ಹೀಗೆ ಹಲವಾರು ಕೃಷಿ ಉಪಕಸುಬುಗಳಲ್ಲಿ ತೊಡಗಿಸಿಕೊಂಡು ಹೆಚ್ಚು ಆದಾಯ ಗಳಿಸಲು ಸಾಧ್ಯವಾಗಿ ಇತರರಿಗೆ ಮಾದರಿಯಾಗಿದ್ದಾರೆ.

ಕೃಷಿ, ತೋಟಗಾರಿಕೆ ಅಧಿಕಾರಿಗಳು ಮತ್ತು ಕೆ.ವಿ.ಕೆ ವಿಜ್ಞಾನಿಗಳೊಂದಿಗೆ ಸಂಪರ್ಕದಲ್ಲಿದ್ದು ಇವರ ಮಾರ್ಗಸೂಚಿಯಂತೆ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಇತರೆ ರೈತ ಮತ್ತು ರೈತ ಮಹಿಳೆಯರೊಂದಿಗೆ ಸಂಪರ್ಕದಲ್ಲಿದ್ದು ತಾವು ಅನುಸರಿಸುತ್ತಿರುವ ಸುಧಾರಿತ ಬೇಸಾಯ ಕ್ರಮಗಳನ್ನು ಹಂಚಿಕೊಳ್ಳುತ್ತಿದ್ದಾರೆ.






# <u>ಸಿರಾ ತಾಲ್ಲೂಕು</u>

ಶ್ರೀಯುತ ಜನಾರ್ಧನ ಹೆಚ್.ಆರ್.

ಹನುಮನಹಳ್ಳಿ, ಗೌಡಗೆರೆ ಹೊಬಳಿ
ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ
ದೂ: 9743795314

ಶ್ರೀಯುತ ಜನಾರ್ಧನ ಹೆಚ್.ಆರ್.ನವರು ಬಿ.ಎಸ್ಸಿ ಪದವಿಧರರಾಗಿದ್ದು, ಕೃಷಿಯಲ್ಲಿ ಸಾಧನೆಗೈಯುವ ನಿಟ್ಟಿನಲ್ಲಿ ಕೃಷಿಯನ್ನೆ ಕಾಯಕವನ್ನಾಗಿ ಮಾಡಿಕೊಂಡಿರುವ ಇವರು ಕೃಷಿಯಲ್ಲಿ ರಾಗಿ ಬೆಳೆಗೆ ಮಡಿ ಪದ್ಧತಿ, ಭತ್ತ ನೂತನ ತಳಿ, ತೊಗರಿಯಲ್ಲಿ ಸಾಲು ಪದ್ದತಿಯನ್ನು ಆಳವಡಿಸಿಕೊಂಡಿರುತ್ತಾರೆ. ತೋಟಗಾರಿಕಾ ಬೆಳೆಯಾದ ದಾಳಿಂಬೆ, ಅಡಿಕೆ, ವಿಳಿದೆಲೆ, ಪಪ್ಪಾಯ ಮತ್ತು ಮೆಣಸಿಕಕಾಯಿಯನ್ನು ಸಹಾ ಇವರು ಬೆಳೆಯುತ್ತ ಬಂದಿದ್ದಾರೆ. ಲೋಕಲ್ ಮತ್ತು ತೈವಾನ್ ತಳಿಗಳನ್ನು ಇವರು ತೋಟದಲ್ಲಿ ಬೆಳೆದಿದ್ದಾರೆ. ಹೂವಿನ ಗಿಡಗಳನ್ನು ಸಹ ಇವರು ಮೊಹಕ ಬಲೆಯಾಗಿ ಬೆಳೆದಿದ್ದಾರೆ. ಅಳಿಲು ಮತ್ತು ಇಲಿಗಳ ನಿಯಂತ್ರಣಕ್ಕೆ ಕಬ್ಬಿಣದ ತಗಡನ್ನು ಅಳವಡಿಕೆ ಮಾಡಿಕೊಂಡಿದ್ದಾರೆ. ಹಣ್ಣುಗಳಾದ ಬಾಳೆ, ಮಾವು, ಸೀಬೆ, ಅಲಸು ಇತ್ಯಾದಿ ಗಿಡಗಳನ್ನು ಸಹ ಇವರು ಬೆಳೆದಿದ್ದಾರೆ. ಮಣ್ಣು ಪರೀಕ್ಷೆ ಮಾಡಿಸಿ ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಲು ಇವರು ಗೊಬ್ಬರ, ಹಸಿರೆಲೆ ಗೊಬ್ಬರ ಮತ್ತು ಶಿಲಿಂದ್ರಿಯಗಳನ್ನು ಇವರು ಬಳಕೆ ಮಾಡುತ್ತಿದ್ದಾರೆ ಮತ್ತು ನೀರಿನ ಬಳಕೆಗೆ ಭಾವಿಯನ್ನು ಸಹ ಮಾಡಿಸಿದ್ದಾರೆ. ಹನಿ ನೀರಾವರಿ ಪದ್ಧತಿಯನ್ನು ಇವರು ಅಳವಡಿಸಿಕೊಂಡಿದ್ದಾರೆ. ಅರಣ್ಯ ಕೃಷಿಯಲ್ಲಿ ಇವರು ತೇಗ, ಹುಣಸೆ, ಬೇವು, ಸರ್ವೆ, ನೇರಳೆ ಮರಗಳನ್ನು ಹೊಲದಲ್ಲಿ ಇವರು ಬೆಳೆದಿದ್ದಾರೆ. ಹೈನುಗಾರಿಕೆಯಲ್ಲಿ ಹೆಚ್.ಎಫ್. ತಳಿಯನ್ನು ಮತ್ತು 25 ಬನ್ನುರು ಕುರಿಗಳನ್ನು ಇವರು ಸಾಕುತ್ತಿದ್ದಾರೆ. ಇತರೆ ಉಪಕಸುಬಾಗಿ ಎಮ್ಮೆಯಿಂದ ಬಂದ ಹಾಲನ್ನು ಇವರು ಬೆಣ್ಣೆ ಮಾಡಿ ಮಾರುತ್ತಿದ್ದಾರೆ. ಇವರು ಆದುನಿಕ ತಂತ್ರಜ್ಞಾನವನ್ನು ಇವರ ತೋಟದಲ್ಲಿ ಹಳವಡಿಸಿಕೊಂಡಿದ್ದಾರೆ. ಇವರು ಉತ್ತಮ ಕೃಷಿ ಮಾಡಿ ಮಾದರಿ ರೈತರಾಗಿ ಇತರೆ ರೈತರಿಗೆ ಮಾಹಿತಿ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡುತ್ತಿದ್ದಾರೆ.

# <u>ಸಿರಾ ತಾಲ್ಲೂಕು</u>

**ಶ್ರೀಮತಿ ದೀಪಿಕಾ ಎಲ್. ಆರ್.**
**ಕೋಂ ಮೂರ್ತಿ ಎ. ಎಂ.**
**ಹಂದಿಕುಂಟೆ, ಸಿರಾ ತಾಲ್ಲೂಕು,**
**ತುಮಕೂರು ಜಿಲ್ಲೆ**
**ದೂ: 7349029030**

ಶ್ರೀಮತಿ ದೀಪಿಕಾ ಎಲ್. ಆರ್., ಭೂ ಹಿಡುವಳಿಯಲ್ಲಿ ಇವರು 3 ಎಕರೆ ಖುಷ್ಕಿ, 2 ಎಕರೆ ನೀರಾವರಿ, 1 ಎಕರೆ ತೋಟವನ್ನು ಮಾಡುತ್ತಿದ್ದಾರೆ. ನೀರಾವರಿ ಸೌಲಭ್ಯಕ್ಕಾಗಿ ಇವರು ಕೊಳವೆ ಬಾವಿಯನ್ನು ಮಾಡಿರುತ್ತಾರೆ. ಕೃಷಿಯಲ್ಲಿ ಹೆಚ್ಚು ಒತ್ತು ನೀಡಿರುವ ಇವರು ತಮ್ಮ ಜಮೀನಿನಲ್ಲಿ ಶೇಂಗಾ, ತೊಗರಿ, ಹುರುಳಿ, ಅಲಸಂದೆ, ರಾಗಿಯನ್ನು ಸಾಲು ಬಿತ್ತನೆ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ. ತೋಟಗಾರಿಕಾ ಬೆಳೆಯಾಗಿ ತೆಂಗು, ಅಡಿಕೆ, ಮಾವು, ನೆಲ್ಲಿಕಾಯಿ, ನಿಂಬೆ ಬೆಳೆಯನ್ನು ಬೆಳೆದಿದ್ದಾರೆ. ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿರುವ ಇವರು, ಹಸುಗಳು, ಎಮ್ಮೆ, ಕುರಿ ಮತ್ತು ಮೇಕೆ ಸಾಕಾಣೆಯನ್ನು ಮಾಡುತ್ತ, ನಾಟಿ ಮತ್ತು ಬಾಯ್ಲರ್ ಕೋಳಿಗಳನ್ನು ಹೊಂದಿದ್ದಾರೆ. ರೇಷ್ಮೆ ಕೃಷಿಯಲ್ಲಿ ಇವರು ಆದಾಯವನ್ನು ಕಂಡುಕೊಂಡು ರೇಷ್ಮೆ ಕೃಷಿಯನ್ನು  ಇವರು ಹಿಪ್ಪುನೇರಳೆ ಬೆಳೆಯಲ್ಲಿ, ರೇಷ್ಮೆ ಹುಳು ಸಾಕಾಣಿಕೆಯನ್ನು ನೂತನ ಪದ್ಧತಿಯನ್ನು ಅಳವಡಿಕೆ ಮಾಡಿಕೊಂಡಿರುತ್ತಾರೆ. ಅರಣ್ಯ ಕೃಷಿ ಪದ್ಧತಿಯಲ್ಲಿ ಹೆಚ್ಚು ಹೆಚ್ಚು ಮರಗಳನ್ನು ಸಹ ಬೆಳೆದಿದ್ದಾರೆ. ಹುಣಸೆ, ಬೇವು ಮರಗಳನ್ನು ಹೊಲದಲ್ಲಿ ಇವರು ಬೆಳೆದಿದ್ದಾರೆ. ಅಂತರ ಬೆಳೆಯಾಗಿ ಮಾವು, ಜಂಬುನೇರಳೆಯನ್ನು ಅರಣ್ಯ ಬೆಳೆಯಾಗಿ ಇವರು ತಮ್ಮ ತೋಟದಲ್ಲಿ ಬೆಳೆದಿದ್ದಾರೆ. ಉಪಕಸುಬುಗಳಾಗಿ ನಾಮಕರಣ, ಮದುವೆ ಇತ್ಯಾದಿಗಳಲ್ಲಿ ಪುಷ್ಪಾಲಂಕಾರ ಮಾಡುವುದು. ಬೀಡಿ ಕಟ್ಟುವುದು, ಬಿಡುವಿನ ವೇಳೆಯಲ್ಲಿ ಬೀಡಿಯನ್ನು ಮಾರಾಟ ಮಾಡುವುದು. ಮನೆಯಲ್ಲಿ ಬಟ್ಟೆಯನ್ನು ಸಹಾ ಹೊಲಿಗೆ ಹಾಕುವುದು ಮಾಡುತ್ತಿದ್ದಾರೆ. ಒಣ ಬೇಸಾಯ ಪದ್ದತಿಗಳನ್ನು ಇವರು ತೋಟದಲ್ಲಿ ಹಳವಡಿಸಿಕೊಂಡಿದ್ದಾರೆ. ಒಣ ಬೇಸಾಯ ಪದ್ಧತಿಗಳಾದ ಇಳಿಜಾರಿಗೆ ಅಡ್ಡಲಾಗಿ ಬದುಗಳ ನಿರ್ಮಾಣ, ನೀರು ಕಾಲುವೆಗಳ ನಿರ್ಮಾಣ, ಮಾಗಿ ಉಳುಮೆ, ಎರಡು ವರ್ಷಗಳಿಗೊಮ್ಮೆ ಆಳವಾದ ಉಳುಮೆಯನ್ನು ಮಾಡುತ್ತಿದ್ದಾರೆ. ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಇವರು ಇತರರಿಗೆ ಮಾದರಿ ರೈತ ಮಹಿಳೆಯಾಗಿ ತಾಂತ್ರಿಕತೆಯನ್ನು ಇತರ ರೈತ ಮಹಿಳೆಯರಿಗೆ ತಲುಪಿಸುತ್ತಿದ್ದಾರೆ.

# ಕೊರಟಗೆರೆ ತಾಲ್ಲೂಕು



ಶ್ರೀ. ಮಲ್ಲಿಕಾರ್ಜುನ ಬಿ, ಎಮ್ ಬಿನ್ ಮೈಲಾರಪ್ಪ ಎಮ್
ಬೋಡಬಂಡೇನಹಳ್ಳಿ ಗ್ರಾಮ, ಹಚಿಹಳ್ಳಿ ಪೋಸ್ಟ್,
ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ
ದೂ: 9844393129

ಶ್ರೀ. ಮಲ್ಲಿಕಾರ್ಜುನ ಬಿ, ಎಮ್ ಬಿನ್ ಮೈಲಾರಪ್ಪ ಎಮ್ ರವರು ಯುವ ರೈತರಾಗಿದ್ದು, ಪಿಯುಸಿ ವಿದ್ಯಾಭ್ಯಾಸ ಮುಗಿಸಿದ್ದಾರೆ. ಇವರು ತಮ್ಮ 5.05 ಎಕರೆ ಜಮೀನಿನಲ್ಲಿ ರಾಗಿ, ಶೇಂಗಾ, ಮೆಕ್ಕೆಜೋಳ ಬೆಳೆಯುತ್ತಿದ್ದು, ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಮಾವು, ಸಪೋಟ, ಬಾಳೆ, ಕಿತ್ತಳೆ ಮತ್ತು ತರಕಾರಿ ಬೆಳೆ ನುಗ್ಗೆಯನ್ನು ಬೆಳೆಯುತ್ತಿದ್ದಾರೆ, ಮೇವಿನ ಬೆಳೆಗಳಾದ ಮುಸುಕಿನಜೋಳ, ನೇಪಿಯಾರ್ ಬೆಳೆಯುತ್ತದಾರೆ ಎಚ್,ಎಫ್ ಮತ್ತು ನಾಟಿ ಹಸುಗಳು ಸಾಕಿದ್ದಾರೆ. ಅರಣ್ಯ ಬೆಳೆಗಳಾದ ಶ್ರೀ ಗಂಧ, ಹೆಬ್ಬೇವು, ಟಿಕ್ ಬೆಳೆಗಳು ಬೆಳೆಯುತ್ತಿದ್ದಾರೆ.

ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಸಾವಯವ ಬೆಳೆ ಪದ್ಧತಿಯಲ್ಲಿ ಬಾಳೆ, ನಿಂಬೆ, ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಅಂತರ ಮತ್ತು ಮಿಶ್ರ ಬೆಳೆ ಪದ್ದತಿಗಳನ್ನು ಅಳವಡಿಸಿಕೊಂಡಿದ್ದಾರೆ. ಅಂತರಬೆಳೆ ಪದ್ಧತಿಯನ್ನು ತೆಂಗಿನ ತೋಟದಲ್ಲಿ ನುಗ್ಗೆ, ಬಾಳೆ ಮತ್ತು ತರಕಾರಿಗಳನ್ನು ಅಳವಡಿಸಿದ್ದಾರೆ. ಭೂಮಿಯ ಫಲವತ್ತತೆಯನ್ನು ವೃದ್ದಿಸಲು ಬರುವ ತ್ಯಾಜ್ಯವನ್ನು ಬಳಸಿ ಎರೆಹುಳು ಮತ್ತು ಕೋಟ್ಟಿಗೆ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಕೀಟ ರೋಗ ನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ, ಕೃಷಿ ಜೊತೆಗೆ ಹೈನುಗಾರಿಕೆ ಮಿಶ್ರತಳಿ ಎಚ್,ಹೆಫ್ ಮತ್ತು ನಾಟಿ ಹಸುಗಳನ್ನು ಸಾಕುತ್ತಿರುವ ಇವರು ತಮ್ಮ ಹೊಲದ ಸುತ್ತಲೂ ಬಹು ವಾರ್ಷಿಕ ಮೇವಿನ ಬೆಳೆಯಾದ ನೇಪಿಯಾರ್ ಮತ್ತು ಮುಸುಕಿನ ಜೊಳವನ್ನು ಬೆಳೆಸಿದ್ದಾರೆ. ಹೈನುಗಾರಿಕೆ ಜೋತೆಗೆ ಕುರಿ ಮತ್ತು ಮೇಕೆ ಸಾಕಣೆ ಮಾಡುತ್ತಿದ್ದಾರೆ ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆ ಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳಾದ ಬಳಸುತ್ತಿದ್ದಾರೆ. ಇವರು ಇತರೆ ಇಲಾಖೆಗಳೊಂದಿಗೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿಜ್ಞಾನಿಗಳ ಜೊತೆಗೆ ಸಂಪರ್ಕ ಹೊಂದಿದ್ದು, ವೈಜ್ಞಾನಿಕವಾಗಿ ಕೃಷಿಯನ್ನು ಮಾಡುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

## ಕೊರಟಗೆರೆ ತಾಲ್ಲೂಕು



ಶ್ರೀಮತಿ. ಗಂಗಮ್ಮ ಕೋಂ ಮಾರುತಿ ಬಿ, ವಿ
ಬೋಡಬಂಡೆನಹಳ್ಳಿ, ಕಸಬಾ ಹೋಬಳಿ
ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ
ದೂ: 9164586950

ಶ್ರೀಮತಿ. ಗಂಗಮ್ಮ ಕೋಂ ಮಾರುತಿ ಬಿ, ವಿ ರವರು ಎಸ್,ಎಸ್,ಎಲ್,ಸಿ ಪಡೆದಿರುವ ಇವರು ತಮ್ಮ 6.26 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ಶೇಂಗಾ, ಜೋಳ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ತರಕಾರಿ ಮತ್ತು ಹೂವಿನ ಬೆಳೆಗಳಾದ ಸುಗಂಧರಾಜ ಬೆಳೆಯನ್ನು ಬೆಳೆಯುತ್ತಿದ್ದಾರೆ, ಮೇವಿನ ಬೆಳೆಗಳಾದ ಮುಸುಕಿನಜೋಳ, ಹೆಚ್.ಎಫ್., ದೇಸಿ, ನಾಟಿ ಕ್ರಾಸ್ ಬ್ರೀಡ್ ಹಸುವನ್ನು, ನಾಟಿ ಮೇಕೆಗಳನ್ನು, ಬ್ಯಾಲರ್ ಕೋಳಿ ಸಾಕಣೆ ಮತ್ತು ಮೀನು ಸಾಕಣೆಯನ್ನು ಮಾಡುತ್ತಿದ್ದಾರೆ. ಅರಣ್ಯ ಬೆಳೆಗಳಾದ ತೇಗಾ, ಹೆಬ್ಬೇವು, ಹಲಸು, ಮರಗೆಣಸು ಬೇವು, ಬೆಳೆಗಳು, ಇದರ ಜೊತೆಗೆ ತೆಂಗಿನ ತೋಟದಲ್ಲಿ ಜೇನು ಸಾಕಾಣೆ ಮಾಡುತ್ತಿದ್ದಾರೆ.

ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಅಂತರ ಮತ್ತು ಮಿಶ್ರ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಭೂಮಿಯ ಫಲವತ್ತತೆಯನ್ನು ವೃದ್ದಿಸಲು ಬರುವ ತ್ಯಾಜ್ಯವನ್ನು ಬಳಸಿ ಎರೆಹುಳು ಮತ್ತು ಕೋಟ್ಟಿಗೆ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಕೀಟ ರೋಗನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ, ಕೃಷಿ ಜೊತೆಗೆ ಹೈನುಗಾರಿಕೆ ಮಿಶ್ರತಳಿ ಹಸುಗಳನ್ನು ಸಾಕುತ್ತಿರುವ ಇವರು ತಮ್ಮ ಹೊಲದ ಸುತ್ತಲೂ ಬಹು ವಾರ್ಷಿಕ ಮೇವಿನ ಬೆಳೆಯಾದ ನೇಪಿಯಾರ್ ಮತ್ತು ಮುಸುಕಿನ ಜೊಳವನ್ನು ಬೆಳೆಸಿದ್ದಾರೆ ಮತ್ತು ಒಣ ಮೇವನ್ನು ಸಂಗ್ರಹಿಸಿ ಬಳಸುತ್ತಿದಾರೆ. ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಲಘು ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆ ಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳನ್ನು ಬಳಸುತ್ತಿದ್ದಾರೆ. ಇದರ ಜೊತೆಗೆ ಜೇನು ಸಾಕಾಣೆ ಪೆಟ್ಟಿಗೆಗಳನ್ನು ತೆಂಗಿನ ತೋಟದಲ್ಲಿ ಅಳವಡಿಕೆ ಮಾಡಿದ್ದಾರೆ ಮತ್ತು ತೆಂಗು ಮತ್ತು ಅಡಿಕೆ ಸಸಿಗಳನ್ನು ಉತ್ಪಾದನೆ ಮಾಡಿ ಅದರ ಲಾಭವನ್ನು ಗಳಿಸುತ್ತಿದ್ದಾರೆ. ಇವರು ತಮ್ಮ ಜಮೀನಿನಲ್ಲಿ ಜೀವಸಾರ ಘಟಕ, ಎರೆಹುಳು ಗೊಬ್ಬರ ಘಟಕ ನಿರ್ಮಿಸಿಕೊಂಡಿದ್ದಾರೆ. ಕೃಷಿ ಉಪಕರಣಗಳಾದ ಚ್ಯಾಪ್ ಕಟ್ಟರ್, ಟ್ರಾಕ್ಟರ್ ಬಳಸುತಿದ್ದಾರೆ.

ಕೃಷಿ, ತೋಟಗಾರಿಕಾ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಇವರ ಕ್ಷೇತ್ರಕ್ಕೆ ಬೇಟಿ ಮಾಡಿ ಮಾಹಿತಿ ಪಡೆದಿದ್ದಾರೆ. ಇವರು ಇತರೆ ಇಲಾಖೆಗಳೊಂದಿಗೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿಜ್ಞಾನಿಗಳ ಜೊತೆಗೆ ಸಂಪರ್ಕ ಹೊಂದಿದ್ದು, ವೈಜ್ಞಾನಿಕವಾಗಿ ಅನ್ನದಾತ, ಕೃಷಿ ಪತ್ರಿಕೆಗಳನ್ನು ಓದಿ ಹೆಚ್ಚಿನ ಮಾಹಿತಿಯನ್ನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಇವರು ಕೃಷಿ ಮತ್ತು ಸಂಬಂದಿತ ಮಾಹಿಯನ್ನು ಇತರರಿಗೆ ನೀಡುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

# ಗುಬ್ಬಿ ತಾಲ್ಲೂಕು



ಶ್ರೀ. ಪುಟ್ಟಸ್ವಾಮಿ ಎ, ಎಸ್ ಬಿನ್ ಸಿದ್ದಪ್ಪ
ಅಡಗೊಂಡನಹಳ್ಳಿ
ಕಡಬಾ, ಹೋಬಳಿ
ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ
ದೂ: 7353390307

ಶ್ರೀ. ಪುಟ್ಟಸ್ವಾಮಿ ಎ, ಎಸ್ ಬಿನ್ ಸಿದ್ದಪ್ಪ ರವರು ಯುವ ರೈತರಾಗಿದ್ದು, ಐ ಟಿ ಐ ವಿದ್ಯಾಭ್ಯಾಸ ಮುಗಿಸಿದ್ದಾರೆ. ಇವರು ತಮ್ಮ 5 ಎಕರೆ ಜಮೀನಿನಲ್ಲಿ ತೊಗರಿ, ರಾಗಿ, ಮೆಕ್ಕೆಜೋಳ, ಉದ್ದು, ಹರಳು, ಅವರೆ, ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ, ಗುಲಾಬಿ, ಬಾಳೆ, ಬೆಣ್ಣೆಹಣ್ಣು, ಹೂವಿನ ಬೆಳೆಗಲಾದ ಗುಲಾಬಿ ಮತ್ತು ಸೇವಂತಿಗೆಯನ್ನು ಬೆಳೆಯುತ್ತಿದ್ದಾರೆ, ತರಕಾರಿ, ಸೊಪ್ಪುಗಳನ್ನು ಬೆಳೆಯುತ್ತಿದ್ದು, ಕೃಷಿ ಚಟುವಟಿಕೆಗೆ ಪೂರಕವಾಗಿ ಹೈನುಗಾರಿಕೆಯಲ್ಲಿ ಹೆಚ್.ಎಫ್, ನಾಟಿ ಮೇಕೆ ಸಾಕಣೆಯನ್ನು ಮಾಡುತ್ತಿದ್ದಾರೆ. ಮೀನುಸಾಕಾಣೆಯನ್ನು ಮಾಡುತ್ತಿದ್ದಾರೆ. ತಳಿಯನ್ನು ಮತ್ತು ನಾಟಿ ಮತ್ತು ಗಿರಿರಾಜ ಕೋಳಿಗಳ ಸಾಕಾಣಿಕೆಯಿಂದ ಆಧಾಯವನ್ನು ಪಡೆಯುತ್ತಿದ್ದಾರೆ. ಅರಣ್ಯ ಕೃಷಿಯನ್ನು ಬದು ಮತ್ತು ಜಮೀನುಗಳಲ್ಲಿ ನಾಟಿಯನ್ನು ಮಾಡಿದ್ದಾರೆ.

ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಮತ್ತು ಅಂತರ ಬೆಳೆ ಪದ್ದತಿಯಲ್ಲಿ ತುಂತುರು ನಿರಾವರಿ ಪದ್ದತಿಯನ್ನು ಆಳವಡಿಸಿಕೊಂಡಿದ್ದಾರೆ ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳಾದ ಬಳಸುತ್ತಿದ್ದಾರೆ. ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಅಂತರ ಮತ್ತು ಮಿಶ್ರ ಬೆಳೆ ಪದ್ದತಿಗಳನ್ನು ಅಳವಡಿಸಿಕೊಂಡಿದ್ದಾರೆ. ಭೂಮಿಯ ಫಲವತ್ತತೆಯನ್ನು ವೃದ್ದಿಸಲು ಹಸಿರೆಳೆ ಗೊಬ್ಬರಗಳನ್ನು ಮಣ್ಣಿನಲ್ಲಿ ಮಿಶ್ರಣ ಮಾಡುತ್ತಿದ್ದು ಮತ್ತು ಇತರೆ ತ್ಯಾಜ್ಯವನ್ನು ಬಳಸಿ ಎರೆಹುಳು ಮತ್ತು ಕೋಟ್ಟಿಗೆ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ಕೀಟ ರೋಗ ನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ, ಕೃಷಿ ಜೊತೆಗೆ ಹೈನುಗಾರಿಕೆ ಮಿಶ್ರತಳಿ ನಾಟಿ ಹಸುಗಳನ್ನು ಸಾಕುತ್ತಿರುವ ಇವರು ತಮ್ಮ ಹೊಲದ ಸುತ್ತಲೂ ಬಹು ವಾರ್ಷಿಕ ಮೇವಿನ ಬೆಳೆಯಾದ ಗಿನಿಹುಲ್ಲು, ಅಗಸೆ ನೇಪಿಯಾರ್ ಮತ್ತು ಮುಸುಕಿನ ಜೋಳವನ್ನು ಬೆಳೆಸಿದ್ದಾರೆ. ಜೇನು ಸಾಕಾಣೆಯಿಂದ ಹೆಚ್ಚುವರಿ ಆದಾಯನ್ನು ತೆಂಗಿನ ತೋಟದಲ್ಲಿ ಮಾಡುತ್ತಿದ್ದಾರೆ. ಇವರ ಜಮೀನಿನಲ್ಲಿ ಮೀನುಗಳನ್ನು ಸಾಕಣೆ ಮಾಡುತ್ತಿದ್ದಾರೆ.

ಕೃಷಿ ಉಪಕರಣಗಳಾದ ಚ್ಯಾಪ್ ಕಟ್ಟರ್, ಪವರ್ ಟಿಲ್ಲರ್ ಬಳಸುತಿದ್ದಾರೆ. ಕೃಷಿ, ತೋಟಗಾರಿಕಾ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಇವರ ಕ್ಷೇತ್ರಕ್ಕೆ ಬೇಟಿ ಮಾಡಿ ಮಾಹಿತಿ ಪಡೆದಿದ್ದಾರೆ. ಇವರು ಇತರೆ ಇಲಾಖೆಗಳೊಂದಿಗೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿಜ್ಞಾನಿಗಳ ಜೊತೆಗೆ ಸಂಪರ್ಕ ಹೊಂದಿದ್ದು, ವೈಜ್ಞಾನಿಕವಾಗಿ ಸಮಗ್ರ ಕೃಷಿ ಪತ್ರಿಕೆಗಳನ್ನು ಓದಿ ಹೆಚ್ಚಿನ ಮಾಹಿತಿಯನ್ನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಇವರು ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸಿದ್ದಾರೆ ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

## ಗುಬ್ಬಿ ತಾಲ್ಲೂಕು



**ಶ್ರೀಮತಿ. ತೇಜಸ್ವಿನಿ ಕೋಂ ರಮೇಶ್ ಸಿ,ಎನ್**
**ಸಿ,ಎಸ್.ಪಾಳ್ಯ ಗ್ರಾಮ, ಸಿ,ಎಸ್ ಪುರ ಹೋಬಳ್ಳಿ**
**ಗುಬ್ಬಿ ತಾಲ್ಲೂಕು**
**ತುಮಕೂರು ಜಿಲ್ಲೆ**
**ದೂ: 9686399196**

ಶ್ರೀಮತಿ. ತೇಜಸ್ವಿನಿ ಕೋಂ ರಮೇಶ್ ಸಿ,ಎನ್ ರವರು. ವರೆಗೆ ಎಸ್,ಎಸ್,ಎಲ್,ಸಿ ವಿದ್ಯಾಭ್ಯಾಸ ಮುಗಿಸಿ, ತಮ್ಮನ್ನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ತಮ್ಮ 4 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ಅವರೆ, ತೊಗರಿ,ಹರಳು, ಹುರುಳಿ, ಉದ್ದು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳಾದ ತೆಂಗು, ಸಪೋಟ, ನಿಂಬೆ, ನುಗ್ಗೆ, ಪಪ್ಪಾಯ ನೆರಳೆ ಸೀಬೆ ಬೆಳೆಯನ್ನು ಬೆಳೆಯುತ್ತಿದ್ದಾರೆ, ಹೂವಿನ ಬೆಳೆಗಲಾದ ಗುಲಾಬಿ, ಕಾಕಡ ಬೆಳೆಯುತ್ತಿದ್ದಾರೆ ಮೇವಿನ ಬೆಳೆಗಳಾದ ಗಿನಿಹುಲ್ಲು, ಅಗಸೆ ಮತ್ತು ಸೂಪರ್ ನೇಪಿಯಾರ್ ನಾಟಿ ಕ್ರಾಸ್ ಬ್ರೀಡ್ ಹಸುವನ್ನು, ನಾಟಿ ಕೋಳಿ ಮತ್ತು ಗಿರಿರಾಜ್ ಕೋಳಿ ಸಾಕಣೆ ಮಾಡುತ್ತಿದ್ದಾರೆ. ಮೀನುಸಾಕಣೆ ಮಾಡುತ್ತದ್ದಾರೆ. ಅರಣ್ಯ ಬೆಳೆಗಳಾದ ಶ್ರೀಗಂಧ, ರಕ್ತಚಂದನ, ಬೆಟ್ಟದನೆಲ್ಲಿ, ಸಾಗುವಾನಿ ಮತ್ತು ಹುಣಸೆ ಮರಗಳನ್ನು ಬೆಳೆಯುತ್ತಿದ್ದಾರೆ.

ಇವರ ಜಮೀನಿನಲ್ಲಿ ಬಿದ್ದ ಮಳೆ ನೀರಿಗೆ ಅಡ್ಡಲಾಗಿ ಬದುಗಳನ್ನು ಮತ್ತು ಹಿಂಗು ಗುಂಡಿಯ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸಿ ಜಮೀನಿಗೆ ಮತ್ತು ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಮೂಲಕ ಪೋಷಕಾಂಶಗಳು ಮತ್ತು ಜೀವಸಾರವನ್ನು ನೀಡುತ್ತಿದ್ದಾರೆ. ಮತ್ತು ಅಂತರ ಬೆಳೆ ಪದ್ಧತಿಯಲ್ಲಿ ತುಂತುರು ನಿರಾವರಿ ಪದ್ಧತಿಯನ್ನು ಆಳವಡಿಸಿಕೊಂಡಿದ್ದಾರೆ ಇವರು ಸಮಗ್ರ ಪೊಷಕಾಂಶಗಳ ನಿರ್ವಹಣೆ ಯಲ್ಲಿ ಬೇವಿನ ಹಿಂಡಿ, ಎರೆಹುಳು ಗೊಬ್ಬರ ಮತ್ತು ಜೈವಿಕ ಗೊಬ್ಬರಗಳಾದ ಬಳಸುತ್ತಿದ್ದಾರೆ. ಇವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ತಮ್ಮ ಜಮೀನಿನ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರು ಅಂತರ ಮತ್ತು ಮಿಶ್ರ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಭೂಮಿಯ ಫಲವತ್ತತೆಯನ್ನು ವೃದ್ದಿಸಲು ಬರುವ ತ್ಯಾಜ್ಯವನ್ನು ಬಳಸಿ ಎರೆಹುಳು ಮತ್ತು ಕೋಟ್ಟಿಗೆ ಗೊಬ್ಬರವನ್ನು ಉತ್ಪಾದಿಸುತ್ತಿದ್ದಾರೆ. ಕೀಟ ರೋಗ ನಿಯಂತ್ರಣಕ್ಕಾಗಿ ಜೈವಿಕ ಪೀಡೆನಾಶಕಗಳಾದ ಟ್ರೈಕೊಡರ್ಮ, ಬೇವಿನ ಹಿಂಡಿ ಮತ್ತು ಎ.ಎಮ್.ಸಿ. ಬಳಸುತ್ತಿದ್ದಾರೆ, ಕೃಷಿ ಜೊತೆಗೆ ಹೈನುಗಾರಿಕೆ ಮಿಶ್ರತಳಿ ನಾಟಿ ಹಸುಗಳನ್ನು ಸಾಕುತ್ತಿರುವ ಇವರು ತಮ್ಮ ಹೊಲದ ಸುತ್ತಲೂ ಬಹು ವಾರ್ಷಿಕ ಮೇವಿನ ಬೆಳೆಯಾದ ಗಿನಿಹುಲ್ಲು, ಅಗಸೆ ನೇಪಿಯಾರ್ ಮತ್ತು ಮುಸುಕಿನ ಜೋಳವನ್ನು ಬೆಳೆಸಿದ್ದಾರೆ.

ಇವರ ಜಮೀನಿನಲ್ಲಿ ಕಾಟ್ಲ, ರೂವು ತಳಿಗಳ ಮೀನುಗಳನ್ನು ಸಾಕಣೆ ಮಾಡುತ್ತಿದ್ದಾರೆ. ತೆಂಗಿನ ತೋಟದಲ್ಲಿ ಜೇನು ಸಾಕಾಣೆ ಮಾಡುವುದರಿಂದ ಆದಾಯವನ್ನು ಪಡೆಯುತ್ತಿದ್ದಾರೆ. ಕೃಷಿ ಉಪಕರ
ಣಗಳಾದ ಚ್ಯಾಪ್ ಕಟ್ಟರ್, ಪವರ್ ಟಿಲ್ಲರ್ ಬಳಸುತಿದ್ದಾರೆ.
ಕೃಷಿ, ತೋಟಗಾರಿಕಾ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಇವರ ಕ್ಷೇತ್ರಕ್ಕೆ ಬೇಟಿ ಮಾಡಿ ಮಾಹಿತಿ ಪಡೆದಿದ್ದಾರೆ. ಇವರು ಇತರೆ ಇಲಾಖೆಗಳೊಂದಿಗೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿಜ್ಞಾನಿಗಳ ಜೊತೆಗೆ ಸಂಪರ್ಕ ಹೊಂದಿದ್ದು, ವೈಜ್ಞಾನಿಕವಾಗಿ ಸಮಗ್ರ ಕೃಷಿ ಪತ್ರಿಕೆಗಳನ್ನು ಓದಿ ಹೆಚ್ಚಿನ ಮಾಹಿತಿಯನ್ನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

## <u>ಕುಣಿಗಲ್ ತಾಲ್ಲೂಕು</u>

**ಶ್ರೀಯುತ ಜಗದೀಶ ಸಿ  ಬಿನ್ ಚಿಕ್ಕೇಗೌಡ**
**ಆಲ್ಕೆರೆ, ಹುತ್ರಿದುರ್ಗ ಹೋಬಳಿ**
**ಕುಣಿಗಲ್ ತಾ, ತುಮಕೂರು ಜಿಲ್ಲೆ**
**ದೂ: 9743118942**

ಶ್ರೀಯುತ ಜಗದೀಶ ಸಿ  ಬಿನ್ ಚಿಕ್ಕೇಗೌಡ ರವರು ಪಿಯುಸಿ ವಿದ್ಯಾಭ್ಯಾಸ ಮುಗಿಸಿ, ತಮ್ಮನ್ನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ 3.10 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ರಾಗಿ, ಹುರುಳಿ, ತೊಗರಿ , ಹಾಗೂ ತೋಟಗಾರಿಗೆ ಬೆಳೆಗಳಾದ ನುಗ್ಗೆ, ಅಡಿಕೆ ಹಾಗೂ ತೆಂಗು, ಅರಣ್ಯ ಬೆಳೆಗಳಾದ ತೇಗ, ಸಿಲ್ವರ್ ಮತ್ತು ಬೆಟ್ಟದ ನೆಲ್ಲಿಗಳನ್ನು ಬೆಳೆದಿದ್ದಾರೆ. ಸಾವಯವ ಕೃಷಿಗೆ ಹಚ್ಚು ಒತ್ತು ನೀಡಿರುವ ಇವರು ಹೆಚ್, ಹೆಎಫ್ ಹಸು ಹಾಗೂ ನಾಟಿ ಕೋಳಿಗಳನ್ನು ಹೊಂದಿದ್ದಾರೆ ಮತ್ತು ಮೇಕೆ ಸಾಕಾಣೆಕೆ ಮಾಡುತ್ತಿದ್ದಾರೆ. ಒಣ ಬೇಸಾಯ ಪದ್ಧತಿ ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಉತ್ತಮ ರೀತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ಸಮಗ್ರ ಪೋಷಕಾಂಶಗಳ ನಿರ್ವಹಣೆಯನ್ನು ಸಾವಯವ ಪದ್ದತಿಯಲ್ಲಿಯೆ ಮಾಡುತ್ತಿದ್ದಾರೆ. ಇವರು ರೇಷ್ಮೆ ಕೃಷಿ ಮಾಡುತ್ತಿದ್ದಾರೆ. ನೀರಾವರಿ ಪದ್ಧತಿಯನ್ನು ಉತ್ತಮ ರೀತಿಯಲ್ಲಿ ಅನುಸರಿಸುತ್ತಿರುವ ಇವರು ಹನಿ ನೀರಾವರಿ ಮತ್ತು ತುಂತುರು ನೀರಾವರಿ ಮತ್ತು ಮಳೆ ನೀರು ಕೊಯ್ಲು ಕೂಡಾ ಮಾಡುತ್ತಿದ್ದು, ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸುತ್ತಿದ್ದು ಉತ್ತಮ ಅದಾಯವನ್ನು ಪಡೆಯುತ್ತಿದ್ದಾರೆ. ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಹಾಗೂ ಬೀಜೋಪಚಾರವನ್ನು ಕೂಡಾ ಸಾವಯವ ಪದ್ದತಿಯಲ್ಲಿಯೇ ನಿರ್ವಹಿಸುತ್ತಿದ್ದು ಸುಧಾರಿತ ಕೃಷಿ ಉಪಕರಣಗಳ ಬಳಕೆಯಿಂದ ಕೃಷಿಯನ್ನು ಉತ್ತಮ ರೀತಿಯಲ್ಲಿ ಕೈಗೊಂಡಿದ್ದಾರೆ. ಜೈವಿಕ ಗೊಬ್ಬರ, ಹಸಿರೆಲೆ ಗೊಬ್ಬರ, ಜೈವಿಕ ಪೀಡೆ ನಾಶಕಗಳ ಬಳಕೆ ಹಾಗೂ ಬೆಳೆ ಉಳಿಕೆಗಳನ್ನು ಉಪಯೋಗಿಸುವ ಮೂಲಕ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿದ್ದಾರೆ. ಸಾಕಷ್ಟು ಯುವ ರೈತರು ಇವರ ಜಮೀನಿಗೆ ಬೇಟಿ ಕೊಟ್ಟು ಕೃಷಿ ತಾಂತ್ರಿಕತೆಗಳನ್ನು ತಮ್ಮ ಜಮೀನಿನಲ್ಲಿ ಕೂಡಿ ಅಳವಡಿಸಿಕೊಂಡಿದ್ದಾರೆ.

ಕೃಷಿ, ತೋಟಗಾರಿಕಾ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಇವರ ಕ್ಷೇತ್ರಕ್ಕೆ ಬೇಟಿ ಮಾಡಿ ಮಾಹಿತಿ ಪಡೆದಿದ್ದಾರೆ. ಇವರು ಇತರೆ ಇಲಾಖೆಗಳೊಂದಿಗೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿಜ್ಞಾನಿಗಳ ಜೊತೆಗೆ ಸಂಪರ್ಕ ಹೊಂದಿದ್ದು, ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಇವರು ಕೃಷಿ ಮತ್ತು ಸಂಬಂದಿತ ಮಾಹಿಯನ್ನು ಇತರರಿಗೆ ನೀಡುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

# <u>ಕುಣಿಗಲ್ ತಾಲ್ಲೂಕು</u>

**ಶ್ರೀಮತಿ ನಾಗರತ್ನಮ್ಮ. ಕೋಂ ಕೃಷ್ಣಪ್ಪ**
**ಶೆಟ್ಟಿಕೆರೆ, ತೆರದಕುಪ್ಪೆ, ಪೋಸ್ಟ್ ಕೊತ್ತಗೆರೆ ಹೋಬಳಿ**
**ಕುಣಿಗಲ್ ತಾ, ತುಮಕೂರು ಜಿಲ್ಲೆ**
**ದೂ: 9880865274**

**ಶ್ರೀಮತಿ ನಾಗರತ್ನಮ್ಮ. ಕೋಂ ಕೃಷ್ಣಪ್ಪ ಇವರು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಬ್ಯಾಸವನ್ನು ಮಾಡಿದ್ದು, ತಮ್ಮ ಗ್ರಾಮದ ಇತರೆ ಯುವ ರೈತ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಸದರಿಯವರು ತಮ್ಮ 2 ಎಕರೆ ಜಮೀನಿನಲ್ಲಿ ಕೃಷಿ ಬೆಳೆ ರಾಗಿ, ತೊಗರಿ, ಬೆಳೆಗಳನ್ನು ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು , ಅಡಿಕೆ, ಟಮೋಟೂ, ಈರೆಗಿಡ ಮತ್ತು ಹೂವಿನ ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಅರಣ್ಯ ಕೃಷಿ ಹೆಚ್ಚು ಒತ್ತು ನೀಡಿರುವ ಇವರು ತಮ್ಮ ಜಮೀನಿನಲ್ಲಿ ಹೆಬ್ಬವು ಹಾಗೂ ಅಮಟೆಕಾಯಿಯನ್ನು ಬೆಳೆದಿದ್ದಾರೆ. ಪಶು ಸಂಗೋಪನೆಯನ್ನು ಕೈಗೊಂಡಿರುವ ಇವರು ಹಸುಗಳು, ಹಾಗೂ ನಾಟಿ ಕೋಳಿಗಳನ್ನು ಹೊಂದಿದ್ದಾರೆ. ಹೂವಿನ ಅಲಂಕಾರ ಮಾಡುವುದರ ಮೂಲಕ ಹೆಚ್ಚಿನ ಅದಾಯವನ್ನು ಹೊಂದುತ್ತಿದ್ದಾರೆ. ಮಿಶ್ರ ಬೆಳೆ ಪದ್ಧತಿ ಹಾಗೂ ಉತ್ತಮ ನೀರಾವರಿ ಪದ್ಧತಿ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪದ್ಧತಿಯನ್ನು ಮಾಡುತ್ತಿದ್ದಾರೆ. ಸಮಗ್ರ ಪೋಷಕಾಂಶ ನಿರ್ವಹಣೆ ಮಾಡುತ್ತಿದ್ದಾರೆ. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳೊಂದಿಗೆ ಹಾಗೂ ಇಲಾಖೆಗಳೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿರುವ ಇವರು ಅವರ ಶಿಫಾರಸ್ಸಿನಂತೆ ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ ಮಾಡುತ್ತಿದ್ದಾರೆ. ಹೆಚ್ಚು ಕೂಲಿಗಳ ಮೇಲೆ ಅವಲಂಬಿತವಾಗದೆ ತಾವೇ ಸ್ವಂತ ಕೃಷಿ ಉಪಕರಣಗಳನ್ನು ತಾಯಾರಿಸಿ ತಮ್ಮ ಜಮೀನಿನಲ್ಲಿ ಬಳಸುತ್ತಿದ್ದು, ಕೃಷಿಯ ಖರ್ಚನ್ನು ಕಡಿಮೆ ಮಾಡಿ ಇತರೆ ಯುವ ರೈತ ಮತ್ತು ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ, ಕಾಂಪೋಸ್ಟ್ ತಯಾರಿಕೆ, ಜೈವಿಕ ಗೊಬ್ಬರ, ಹಸಿರೆಲೆ ಗೊಬ್ಬರ ಹಾಗೂ ಬೆಳೆ ಉಳಿಕೆಗಳ ಉಪಯೋಗ ಮಾಡುತ್ತಿದ್ದು, ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿದ್ದಾರೆ. ಹಾಲು ಉತ್ಪಾದಕರ ಸಂಘ ಮತ್ತು ಇತರೆ ಸಂಘಗಳ ಪದಾದಿಕಾರಿಯಾಗಿದ್ದು ಇತರೆ ರೈತ ಮಹಿಳೆಯರಿಗೆ ತಾಂತ್ರಿಕತೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.**

# ತಿಪಟೂರು ತಾಲ್ಲೂಕು

ಭರತ್ ಕುಮಾರ್ ಪಿ.ಸಿ ಬಿನ್ ಚಂದ್ರಪ್ಪ
ಪಟ್ರೇಹಳ್ಳಿ, ಹೂಲಿಹಳ್ಳಿ ಅಂಚೆ, ಹೋನ್ನವಳ್ಳಿ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು ಜಿಲ್ಲೆ
ದೂ: 8310754409

ಭರತ್ ಕುಮಾರ್ ಪಿ.ಸಿ ಬಿನ್ ಚಂದ್ರಪ್ಪ ರವರು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಬ್ಯಾಸವನ್ನು ಮಾಡಿದ್ದು. ತಮ್ಮ 3.34 ಎಕರೆ ಜಮೀನಿನಲ್ಲಿ ರಾಗಿ, ತೊಗರಿ, ಹೆಸರು, ಅಲಸಂದೆ, ಎಳ್ಳು, ಅವರೆ, ಅಡಿಕೆ, ತೆಂಗು, ಟಮೋಟೂ, ಬದನೆ, ಬಾಳೆ ಮಾವು ಬೆಳೆಗಳಲ್ಲಿ ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ವೈಜ್ಞಾನಿಕ ಸಲಹೆಯ ಮೇರೆಗೆ ಬೆಳೆಯುತ್ತಿದ್ದಾರೆ. ಇವರು 1 ಎಕರೆ ಜಾಗದಲ್ಲಿ ಬದನೆ ಅಳವಡಿಸಿಕೊಂಡು ಕಾಯಿಯ ಇಳುವರಿಯಿಂದ ಆದಾಯ ಪಡೆದುಕೊಳ್ಳುತ್ತಿದ್ದಾರೆ. ನೀರಿನ ಸಮರ್ಪಕ ಬಳಕೆಗಾಗಿ ತಮ್ಮ ಜಮೀನಿನಲ್ಲಿ ತುಂತುರು, ಹನಿ ನೀರಾವರಿ ಕೈಗೊಂಡಿರುವ ಇವರು ತೆಂಗು, ಬದನೆ, ಅವರೆ, ಅಡಿಕೆ, ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿದ್ದಾರೆ. ಹೈನುಗಾರಿಕೆಯನ್ನು ಮಾಡುತ್ತಿರುವ ಇವರು ನಾಟಿ ಹಸು, ಹೆಚ್.ಎಫ್. ನಾಟಿ ಹೋರಿ ತಳಿ ಸಾಕಿದ್ದಾರೆ. ಮೇವಿನ ಕೊರತೆ ನೀಗಿಸಲು ಮೇವಿನ ಬೆಳೆಗಳಾದ ಮೆಕ್ಕೆ ಜೋಳ, ಗಿನಿಹುಲ್ಲು, ಕೆನ್ ಜೋಳ ಬೆಳೆಯುತ್ತಿದ್ದಾರೆ ಹಾಗೂ ಕುರಿ ಮತ್ತು ಮೇಕೆ ಸಾಕಾಣಿಕೆ ಮಾಡುತ್ತಿದ್ದು, ಕೃಷಿ ಜೊತೆ ಕೃಷಿ ಅರಣ್ಯಕ್ಕೆ ಒತ್ತು ನೀಡಿರುವ ಹೆಬ್ಬೇವು, ತ್ಯಾಗ ಮರ ಬೆಳೆಸಿದ್ದಾರೆ. ಎರೆಹುಳು ಗೊಬ್ಬರ ಘಟಕ, ಪಂಚಗವ್ಯ ತಯಾರಿಕೆ ಪದ್ದತಿ ಅಳವಡಿಸಿಕೊಂಡು ಸಾವಯವ ಕೃಷಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಕಾಣಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗೆ ಜೈವಿಕ ಶಿಲೀಂದ್ರ ನಾಶಕಗಳನ್ನು ಬಳಸಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿರುತ್ತಾರೆ. ದರ್ಮಸ್ಥಳ ನಿರಂತರ ಪತ್ರಿಕೆಗೆ ಚಂದಾದಾರರಾಗಿರುತ್ತಾರೆ.

ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆಯ ಹಾಗೂ ಅಭಿವೃದ್ದಿ ಇಲಾಖೆಗಳ ಜೊತೆ ನಿರಂತರ ಸಂಪರ್ಕ ಹೊಂದಿದ್ದು, ಅಧುನಿಕ ಕೃಷಿ ಕೈಗೊಳ್ಳುತ್ತಿದ್ದಾರೆ. ಇವರು ಕೃಷಿ ಮತ್ತು ಸಂಬಂದಿತ ಮಾಹಿಯನ್ನು ಇತರರಿಗೆ ನೀಡುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.

# ತಿಪಟೂರು ತಾಲ್ಲೂಕು

**ಮೇಘ ಜಿ ಕೋಂ ರುದ್ರೇಶ ಎನ್**
**ನಾಗತಿಹಳ್ಳಿ ಗ್ರಾಮ ಮತ್ತು ಕೊನೇಹಳ್ಳಿ ಅಂಚೆ**
**ಕಸಬಾ ಹೋಬಳಿ, ತಿಪಟೂರು ತಾಲ್ಲೂಕು,**
**ತುಮಕೂರು ಜಿಲ್ಲೆ**
**ದೂ: 9663489968**

ಮೇಘ ಜಿ ಕೋಂ ರುದ್ರೇಶ ಎನ್ ರವರು ಬಿ,ಎ ಪದವಿ ವ್ಯಾಸಂಗ ಮಾಡಿದ್ದು ವ್ಯವಸಾಯದಲ್ಲಿ ಸಾಧನೆ ಮಾಡಬೇಕೆಂಬ ನಿಟ್ಟಿನಲ್ಲಿ ಇತರರಿಗೆ ಮಾದರಿ ರೈತಮಹಿಳೆಯಾಗಿರುತ್ತಾರೆ. ತಮ್ಮ 4.14 ಎಕರೆ ಜಮೀನಿನಲ್ಲಿ ರಾಗಿ, ತೊಗರಿ, ಹರಳು, ಹುರುಳಿ,ಉದ್ದು, ಹೆಸರು, ಅಡಿಕೆ, ತೆಂಗು, ಬದನೆ, ಬೀನ್ಸ್, ಕೊತ್ತಮರಿಸುಪ್ಪು, ದಂಟಿನಸೊಪ್ಪು ಹಾಗೂಪಾಲಾಕ್ ಬೆಳೆಗಳಲ್ಲಿ ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ತಿಪಟೂರು ಕೃಷಿ ಇಲಾಖೆಯ ಅಧಿಕಾರಿಗಳ ವೈಜ್ಞಾನಿಕ ಸಲಹೆಯ ಮೇರೆಗೆ ಬೆಳೆಯುತ್ತಿದ್ದಾರೆ. ಬೆಳೆಯನ್ನು ವೈಜ್ಞಾನಿಕವಾಗಿ ಬೆಳೆಯುತ್ತಿರುವ ಇವರು ಜೈವಿಕ ಗೊಬ್ಬರಗಳಾದ ಪಿ.ಎಸ್.ಬಿ. ಅರ್ಕ ಸೂಕ್ಷ್ಮ ಜೀವಿಗಳ ಸಂಕೀರ್ಣ, ಬೇವಿನ ಎಣ್ಣೆ ಬಳಸಿ ಹೆಚ್ಚಿನ ಇಳುವಳಿ ಪಡೆಯುತ್ತಿದ್ದಾರೆ. ನೀರಿನ ಸಮರ್ಪಕ ಬಳಕೆಗಾಗಿ ತಮ್ಮ ಜಮೀನಿನಲ್ಲಿ ತುಂತುರು, ಹನಿ ನೀರಾವರಿ ಕೈಗೊಂಡಿರುವ ಇವರು ತರಕಾರಿ ಬೆಳೆಗಳಿಗೆ ಅಳವಡಿಸಿದ್ದಾರೆ. ಹೈನುಗಾರಿಕೆಯನ್ನು ಮಾಡುತ್ತಿರುವ ಇವರು 1 ಹೆಚ್.ಎಫ್. 5 ಜರ್ಸಿ ಬೇಸಾಯಮಾಡಲು ಅಮೃತ್‌ಮಾಲ್ ಹೋರಿ ತಳಿ ಸಾಕಿದ್ದಾರೆ. ಮೇವಿನ ಕೊರತೆ ನೀಗಿಸಲು ಮೇವಿನ ಬೆಳೆಗಳಾದ ಸಿಓಎಫೆಸ್–31 ಹಾಗೂ ನೇಪಿಯಾರ್ ಬೆಳೆಯುತ್ತಿದ್ದು ಬೇಸಿಗೆಯಲ್ಲಿ ಮೇವಿನ ಕೊರತೆ ನೀಗಿಸಲು ಮೇವು ಸಂಸ್ಕರಣೆ ಹಾಗೂ ಒಣ ಮೇವು ಶೇಕರಣೆ ಕೈಗೊಂಡಿದ್ದಾರೆ. ಕೃಷಿ ಜೊತೆ ಕೃಷಿಅರಣ್ಯಕ್ಕೆ ಒತ್ತು ನೀಡಿರುವ ಇವರು ಸುಮಾರು ಹುಣಸೆ, ಟೀಕ್ ಮರ ಬೆಳೆಸಿದ್ದಾರೆ.

ಕೃಷಿ ಇಲಾಖೆಯ ಹಾಗೂ ಅಭಿವೃದ್ದಿ ಇಲಾಖೆಗಳ ಜೊತೆ ನಿರಂತರ ಸಂಪರ್ಕ ಹೊಂದಿದ್ದು, ಅಧುನಿಕ ಕೃಷಿ ಕೈಗೊಳ್ಳುತ್ತಿದ್ದಾರೆ. ಜೇನು ಸಾಕಾಣೆಯಿಂದ ಹೆಚ್ಚುವರಿ ಲಾಭ ಗಳಿಸುತ್ತದ್ದಾರೆ. ಹಸಿರೆಲೆ ಗೊಬ್ಬರದ ಗಿಡಗಳು, ಎರೆಹುಳು ತೊಟ್ಟಿ ಮತ್ತು ಜೈವಿಕ ಗೊಬ್ಬರ ಘಟಕ ನಿರ್ಮಿಸಿಕೊಂಡು ಸಾವಯವ ಕೃಷಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ತಮ್ಮ ಹೊಲಗಳಲ್ಲಿ ಕಾಣಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗೆ ಟ್ರೈಕೋಡರ್ಮಾ ಜೈವಿಕ ಶಿಲೀಂದ್ರ ನಾಶಕ, ಬೇವಿನ ಹಿಂಡಿ, ಹಸುವಿನ ಗಂಜಲ ಬಳಸಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿರುತ್ತಾರೆ. ಇವರು ಕೃಷಿ ಮತ್ತು ಸಂಬಂದಿತ ಮಾಹಿಯನ್ನು ಇತರರಿಗೆ ನೀಡುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದು, ಇತರೆ ಯುವ ರೈತರಿಗೆ ಮಾದರಿಯಾಗಿದ್ದಾರೆ.